Private Members Resolutions

(i) *re : introduction of Kannada medium in all Schools and Colleges*

† ಟಿ. ಆರ್. ಶಾಮಣ್ಣ (ಕೋಟೆ) —ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ನಿರ್ಣಯವನ್ನು ಮಂಡಿಸುತ್ತೇನೆ.

"ಈ ರಾಜ್ಯದಲ್ಲಿನ ಎಲ್ಲ ಶಾಲಾ ಹಾಗೂ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೊಳಿಸಿ ಹಾಗೂ ಆಡಳಿತದ ಎಲ್ಲಾ ಮಟ್ಟದಲ್ಲೂ ಕನ್ನಡವನ್ನು ಕಟ್ಟುನಿಟ್ಟಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಬೇಕೆಂದು ಸರ್ಕಾರದವರಿಗೆ ಈ ಸಭೆಯವರು ಶಿಫಾರಸು ಮಾಡುತ್ತಾರೆ."

ಅಧ್ಯಕ್ಷರು.—ನಿರ್ಣಯವನ್ನು ಮಂಡಿಸಲಾಗಿದೆ. "ಈ ರಾಜ್ಯದಲ್ಲಿನ ಎಲ್ಲ ಶಾಲಾ ಹಾಗೂ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೊಳಿಸಿ ಹಾಗೂ ಆಡಳಿತದ ಎಲ್ಲಾ ಮಟ್ಟದಲ್ಲೂ ಕನ್ನಡವನ್ನು ಕಟ್ಟುನಿಟ್ಟಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಬೇಕೆಂದು ಸರ್ಕಾರದವರಿಗೆ ಈ ಸಭೆಯವರು ಶಿಫಾರಸು ಮಾಡುತ್ತಾರೆ."

† ಟಿ. ಆರ್. ಶಾಮಣ್ಣ —ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಗಾಂಧೀಜಿಯವರ ಒಂದು ಆಶೀರ್ವಾದದಿಂದ, ಮತ್ತು ಆಗಿನ ಕಾಂಗ್ರೆಸ್ಸಿನ ಆದೇಶದಂತೆ ಈ ನಮ್ಮ ರಾಷ್ಟ್ರದಲ್ಲಿ ಈ ಭಾಷಾವಾರು ಪ್ರಾಂತಗಳು ನಿರ್ಮಾಣವಾಗಬೇಕು ಎಂಬ ತತ್ವವನ್ನು ಒಪ್ಪಿಕೊಳ್ಳುವ ಹಾಗೆ ಇತ್ತು. ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ಮೇಲೂ ಕೂಡ ತಕ್ಷಣವೇ ಈ ರಾಜ್ಯ ವಿಂಗಡಣೆಯನ್ನು, ಭಾಷಾವಾರು ವಿಂಗಡಣೆಯನ್ನು ಮಾಡಬೇಕು ಎಂದು ಕೊಠಾರಿ ಕಮಿಷನ್ ಮಾಡಿ, ಭಾಷಾವಾರು ಪ್ರಾಂತಗಳನ್ನು ಮಾಡಿ ಆಯಿತು. ಅದರ ಪರಿಣಾಮವಾಗಿ ಸುಮಾರು ೧೯ ವರ್ಷದ ಕೆಳಗಡೆ, ನಮ್ಮ ಅನೇಕ ವರ್ಷಗಳ ಬಯಕೆಯಾದಂತೆ ವಿಶಾಲ ಕರ್ನಾಟಕ ಸೃಷ್ಟಿಗೆ ಬಂತು. ಇಷ್ಟೆಲ್ಲಾ ಆದರೂ ಕೂಡ ಇದುವರೆಗೆ ಯಾವ ವಿಧವಾದ ಪರಿಣಾಮಕಾರಿಯಾದಂತಹ ಒಂದು ಕಾರ್ಯಕ್ರಮ ತೆಗೆದುಕೊಳ್ಳದೇ, ಹೆಸರಿಗೆ ಮಾತ್ರ ಕನ್ನಡ ಮಾಧ್ಯಮ ಎನ್ನತಕ್ಕದ್ದು ಇದ್ದು ೧೦೦ಕ್ಕೆ ೯೦ ಭಾಗದಷ್ಟು ಇಂಗ್ಲೀಷ್‌ನಲ್ಲಿ ವ್ಯವಹಾರ ನಡೆಯುತ್ತಿರುವುದು, ೧೯ ವರ್ಷವಾದರೂ ಕೂಡ ಶೋಚನೀಯ ವಿಚಾರ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ನಾನು ಈ ನಿರ್ಣಯವನ್ನು ತರಬೇಕಾದ ಅವಶ್ಯಕತೆ ಬಂತು. ಈಗ ೧೯೭೨ರಲ್ಲಿ ಸರ್ಕಾರ ಒಂದು ಆಜ್ಞೆಯನ್ನು ಕಳುಹಿಸಿ ತಾಲ್ಲೂಕು ಮಟ್ಟದಲ್ಲಿ ಈ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಬೇಕು ಎನ್ನುವ ಒಂದು ಆದೇಶವನ್ನು ಆಗಲೇ ಕೊಟ್ಟಿದ್ದು ಆ ಆದೇಶ, ಆದೇಶವಾಗಿಯೇ ಉಳಿದಿದೆಯೇ ಹೊರತು, ಪೂರ್ಣವಾಗಿ ಅದರಿಂದ ಹೆಚ್ಚಿಗೆ ಪರಿಣಾಮಕಾರಿಯಾದಂತ ಫಲ ದೊರಕದೆ ಇರುವುದು ಬಹಳ ಶೋಚನೀಯವಾದ ವಿಚಾರ. ಈಗ ಸರ್ಕಾರದವರು ಅನೇಕ ಹೊಸ ಹೊಸ ಧ್ಯೇಯಗಳನ್ನು ಅನುಸರಿಸುತ್ತಿದ್ದಾರೆ ; ಭೂಸುಧಾರಣಾ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ, ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ, ಇದರ ಜೊತೆಗೆ ವಿದ್ಯುಚ್ಛಕ್ತಿ ದರ, ನೀರಿನ ದರ ಮುಂತಾದ ವಿಚಾರಗಳು ಹಳ್ಳಿಗಾಡಿನ ಜನರು ತಿಳಿದುಕೊಳ್ಳಬೇಕಾದ್ದು ಅವಶ್ಯಕವಿರುವ ಕಾಲದಲ್ಲಿ ಸರ್ಕಾರದ ಆಡಳಿತ ವ್ಯವಹಾರವನ್ನು ಇಂಗ್ಲಿಷಿನಲ್ಲೇ ನಡೆಸುತ್ತಿದ್ದರೆ ಏನು ಪ್ರಯೋಜನ ? ಗ್ರಾಮೀಣ ಜನರ ಅಭಿವೃದ್ಧಿಗಾಗಿ ನಾವು ಯೋಜನೆ ಹಾಕಿಕೊಂಡಿದ್ದೇವೆ; ಅವುಗಳನ್ನು ಕಾರ್ಯಗತ ಮಾಡುತ್ತೇವೆ ಎಂದು ಸರ್ಕಾರದವರು ಹೇಳುವಾಗ, ಆ ಗ್ರಾಮೀಣ ಜನರ ಆಡು ಭಾಷೆಗೆ ಹೆಚ್ಚಿನ ಮಹತ್ವ ಕೊಡದೆ, ಇಂಗ್ಲೀಷ್‌ನಲ್ಲಿಯೇ ಇವುಗಳ ವ್ಯವಹಾರಗಳನ್ನು ನಡೆಸುತ್ತಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ.

ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯು ಆಡಳಿತ ಭಾಷೆಯಾಗದೇ ಇರುವುದಕ್ಕೆ ನಮ್ಮ ಸರ್ಕಾರದ ಅಧಿಕಾರಿಗಳಿಗೆ ಕನ್ನಡ ಭಾಷೆಯ ಮೇಲೆ ಯಾವ ವಿಧವಾದ ಪ್ರೇಮ ಮತ್ತು ನಿಷ್ಠೆ ಇಲ್ಲದಿರುವುದೇ ಮೂಲ ಕಾರಣವಾಗಿದೆ ಎಂದು ಹೇಳುತ್ತೇವೆ. ಕನ್ನಡವು ಆಡಳಿತ ಭಾಷೆಯಾದರೆ, ನಮ್ಮ ಪ್ರತಿಷ್ಠೆ ಉಳಿಯುವುದಿಲ್ಲ ಎನ್ನುವ ಮನೋಭಾವ ನಮ್ಮ ಸರ್ಕಾರದ ಅಧಿಕಾರಿಗಳಿಗೆ ಇದ್ದಂತೆ ಕಾಣುತ್ತದೆ. ಎಲ್ಲಿಯವರೆಗೆ, ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯಾಗಬೇಕು ಎನ್ನುವ ಕಡ್ಡಾಯ ಅಭಿಪ್ರಾಯ ನಮ್ಮ ಸರ್ಕಾರದ ಅಧಿಕಾರಿಗಳಿಗೆ ಬರುವುದಿಲ್ಲ, ಅಲ್ಲಿಯವರೆಗೆ ಸರ್ಕಾರದವರು ವರ್ಷ ವರ್ಷ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು ; ಮತ್ತು ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂದು ಸುಮಾರು ೧೨-೧೫ ಲಕ್ಷ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದಾರೆ, ಅದು ಏನೂ ಪ್ರಯೋಜನವಾಗುವುದಿಲ್ಲ. ನೆರೆರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು ಮತ್ತು ಉತ್ತರದ ಅನೇಕ ರಾಜ್ಯಗಳಲ್ಲಿ ಆಡಳಿತ ವ್ಯವಹಾರಗಳನ್ನು

ಸ್ಥಳೀಯ ಭಾಷೆಯ ಮುಖಾಂತರ ನಡೆಸುತ್ತಿರುವಾಗ, ನಮ್ಮ ಕರ್ನಾಟಕ ರಾಜ್ಯ ಈ ವಿಚಾರದಲ್ಲಿ ಏತಕ್ಕೆ ಹಿಂದೆ ಉಳಿದಿದೆ ಎಂದು ನಾವು, ನಮ್ಮನ್ನೇ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಹೀಗೆ ನಾವು. ಸರ್ಕಾರದವರನ್ನು ಪ್ರಶ್ನೆ ಮಾಡಿದಾಗ, ಸರ್ಕಾರದವರು, ನಾವು ಈ ಕುರಿತು ಅನೇಕ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡಿದ್ದೇವೆ. ಎನ್ನುವ ಮಾಮೂಲು ಉತ್ತರವನ್ನೇ ನಮಗೆ ಕೊಡುತ್ತಾರೆ. ಆಡಳಿತ ಶಬ್ದಕೋಶ ತಯಾರು ಮಾಡಲಾಗಿದೆ, ನಿತ್ಯ ವ್ಯವಹಾರಕ್ಕೆ ಅನುಕೂಲವಾಗುವ ಉದ್ದೇಶದಿಂದ ಕರ್ನಾಟಕ ಸೇವಾ ನಿಯಮಾವಳಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಕಾರ್ಯ ಮುಗಿಯುತ್ತಾ ಬಂದಿದೆ ಸೂಚಕ ಪತ್ರ ಮುಂತಾದವುಗಳನ್ನು ಭಾಷಾಂತರ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ, ಸಚಿವಾಲಯದ ಮುಖ್ಯಾಧಿಕಾರಿಗಳು ಮತ್ತಿತರ ಅಧಿಕಾರಿಗಳು ಸರ್ಕಾರದ ಆದೇಶಗಳನ್ನು ಕನ್ನಡದಲ್ಲಿಯೇ ಕಳುಹಿಸುವಂತೆ ಮಾಡಲು ಯೋಚನೆ ಮಾಡುತ್ತಿದ್ದೇವೆ, ಈಗಾಗಲೇ ಬೆಳಗಾವಿ ಜಿಲ್ಲೆಯಲ್ಲಿ ಕನ್ನಡದಲ್ಲಿ ಪತ್ರ ವ್ಯವಹಾರ ನಡೆಸುವುದಕ್ಕೆ ಏರ್ಪಾಡು ಮಾಡಲಾಗಿದೆ, ಅಷ್ಟೇ ಅಲ್ಲದೆ, ಈ ನಿಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯಗಳೂ ಕೂಡ ಅನೇಕ ಪ್ರಕಟಣೆಗಳನ್ನು ಮಾಡುತ್ತಿದ್ದಾರೆ ಎಂದು ಹತ್ತಾರು ಕಾರಣಗಳನ್ನು ಕೊಡುತ್ತಿದ್ದಾರೆಯೇ ಹೊರತು, ವಾಸ್ತವವಾಗಿ ನೋಡಿದರೆ, ನಮ್ಮಲ್ಲಿ ಪರಿಣಾಮಕಾರಿಯಾಗಿ ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲು ಕಾರ್ಯಕ್ರಮಗಳು ಜರುಗುತ್ತಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ.

೧೯೬೩ನೇ ಇಸವಿಯಲ್ಲಿ ನಾನು ನಗರಸಭೆಗೆ ಕಾರ್ಪೊರೇಟರ್ ಆಗಿ ಆಯ್ಕೆಯಾದಾಗ, ನಗರಸಭೆಯ ವ್ಯವಹಾರವೆಲ್ಲಾ ಪೂರ್ಣವಾಗಿ ಕನ್ನಡದಲ್ಲೇ ಆಗಬೇಕೆಂದು ಅವತ್ತಿನ ದಿವಸವೇ ನಾವು ತೀರ್ಮಾನ ಮಾಡಿ, ಕನ್ನಡ ಬೆರಳಚ್ಚು ಯಂತ್ರಗಳನ್ನು ತರಿಸಿ, ಅವುಗಳಿಗೆ ಕನ್ನಡ ಬೆರಳಚ್ಚುಗಾರರನ್ನೂ ಮತ್ತು ಶೀಘ್ರಲಿಪಿಗಾರರನ್ನೂ ನೇಮಿಸಲಾಯಿತು. ನಗರಸಭೆಯಲ್ಲಿ ಎಲ್ಲಿಯವರೆಗೆ ಚುನಾಯಿತ ಪ್ರತಿನಿಧಿಗಳು ಇದ್ದರೋ ಅಲ್ಲಿಯವರೆಗೆ ಅಲ್ಪಸ್ವಲ್ಪ ಕನ್ನಡದಲ್ಲಿ ವ್ಯವಹಾರ ನಡೆಯುತ್ತಿತ್ತು. ಈಗ ಅಲ್ಲಿ ಆಡಳಿತಾಧಿಕಾರಿಯವರು ಅಧಿಕಾರಕ್ಕೆ ಬಂದಮೇಲೆ ಒಂದು ಕನ್ನಡ ಬೆರಳಚ್ಚು ಯಂತ್ರಗಳೂ ಕೆಲಸ ಮಾಡುತ್ತಿಲ್ಲ. ಕನ್ನಡ ಬೆರಳಚ್ಚು ಯಂತ್ರಗಳ ಮೇಲೆ ಧೂಳು ತುಂಬಿದ್ದು ಅದನ್ನು ಸೀಟದೆ ಇರತಕ್ಕ ಪರಿಸ್ಥಿತಿಯನ್ನು ನಾವು ಇವತ್ತಿನ ದಿವಸ ನಗರಸಭೆಯಲ್ಲಿ ನೋಡುತ್ತಿದ್ದೇವೆ. ಆಡಳಿತ ನಡೆಸತಕ್ಕವರು ಕನ್ನಡದಲ್ಲಿ ವ್ಯವಹಾರ ನಡೆಸುವ ಬಗ್ಗೆ ಸಾಕಷ್ಟು ಗಮನವನ್ನು ಹರಿಸಿಲ್ಲ ಎಂಬುದು ಇವರಿಂದ ವೇದ್ಯವಾಗುತ್ತದೆ. ಇದರ ಜೊತೆಗೆ, ಸರ್ಕಾರದ ಅಧಿಕಾರಿಗಳಿಗೆ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಮತ್ತು ಮಮತೆ ಇಲ್ಲದಿರುವುದೇ ಅವರು ಕನ್ನಡ ಭಾಷೆಯನ್ನು ಅಸಡ್ಡೆಯಾಗಿ ಕಾಣುವುದಕ್ಕೂ ಮತ್ತು ಆಡಳಿತ ಭಾಷೆಯನ್ನಾಗಿ ಮಾಡದೇ ಇರುವುದಕ್ಕೆ ಮುಖ್ಯ ಕಾರಣ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದುದರಿಂದ, ಸರ್ಕಾರದ ಹಿರಿಯ ಅಧಿಕಾರಿಗಳು, ತಮ್ಮ ಎಷ್ಟು ಮಕ್ಕಳನ್ನು ಕಾನ್ವೆಂಟ್‌ಗೆ ಕಳುಹಿಸುತ್ತಿದ್ದಾರೆ ? ಎಷ್ಟು ಜನ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸುತ್ತಿದ್ದಾರೆ ಮತ್ತು ಎಷ್ಟು ಜನ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸುತ್ತಿದ್ದಾರೆ ಎಂಬ ಅಂಕಿ-ಅಂಶಗಳನ್ನು ತರಿಸಿಕೊಳ್ಳಬೇಕಾಗಿದೆ. ತಮ್ಮ ಮಕ್ಕಳು ಇಂಗ್ಲಿಷ್‌ನಲ್ಲಿ ವಿದ್ಯಾಭ್ಯಾಸ ಮಾಡಿದರೆ ಮಾತ್ರ, ಮುಂದೆ ಅವರು ದೊಡ್ಡ ವಿದ್ಯಾವಂತರಾಗುತ್ತಾರೆ, ಅವರ ಮುಂದಿನ ಭವಿಷ್ಯ ಉಜ್ವಲವಾಗುತ್ತದೆ ಎನ್ನುವ ಮನೋಭಾವ ಅವರಿಗಿದ್ದ ಹಾಗೆ ಕಾಣುತ್ತಿದೆ. ಆದುದರಿಂದ, ಅಧಿಕಾರಿಗಳಿಂದ ಈ ಬಗ್ಗೆ ಒಂದು ಅಂಕಿ-ಅಂಶವನ್ನು ತರಿಸಿದರೆ, ಆಗ ಅವರಿಗೆ ಕನ್ನಡದ ಮೇಲೆ ಎಷ್ಟರಮಟ್ಟಿಗೆ ಅಭಿಮಾನವಿದೆ, ಪ್ರೇಮವಿದೆ ಎನ್ನುವುದು ಗೊತ್ತಾಗುತ್ತದೆ. ಸರ್ಕಾರದ ಅಧಿಕಾರಿಗಳ ಮನೋಭಾವ ಬದಲಾಗದ ಹೊರತು, ನಾವು ಎಷ್ಟು ಹಣ ಖರ್ಚು ಮಾಡಿದರೂ ಪ್ರಯೋಜನವಿಲ್ಲ ; ಮತ್ತು ನಾವು ಎಷ್ಟು ಧ್ಯೇಯಗಳನ್ನಿಟ್ಟುಕೊಂಡು ಅವುಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ, ಸರ್ಕಾರದವರು, ಅದಾಗಿದೆ, ಇದಾಗಿದೆ ಎಂದು ಹೇಳುವುದರ ಬದಲು, ಏನಾಗಬೇಕಾಗಿದೆ, ಈಗ ಎಲ್ಲಿಯವರೆಗೆ ಸಾಧನೆಯಾಗಿದೆ, ಸಾಧನೆಯಾಗಿರುವುದರಿಂದ ನಮಗೆ ಪ್ರಯೋಜನವೇನಾಗಿದೆ ಎನ್ನುವುದರ ಕಡೆಗೆ ಗಮನ ಹರಿಸಿದ ಪಕ್ಷದಲ್ಲಿ ನಮ್ಮ ದಾರಿ ಆಗ ಸುಗಮವಾಗುತ್ತದೆ. ನಮ್ಮ ರಾಜ್ಯ ಮೊದಲು ಏಕೀಕರಣವಾಯಿತು ; ಆನಂತರ "ಕರ್ನಾಟಕ" ಎಂಬ ಹೆಸರನ್ನೂ ಪಡೆಯಿತು. ಇಷ್ಟೆಲ್ಲಾ ಆದರೂ ಕೂಡ, ನಮ್ಮ ಸರ್ಕಾರದ ಅನೇಕ ವ್ಯವಹಾರಗಳು ಕನ್ನಡದಲ್ಲೇ ನಡೆಯುವುದರ ಬದಲು, ಇಂಗ್ಲೀಷಿನಲ್ಲಿ ನಡೆಯುತ್ತಿರುವುದು ನಿಜವಾಗಲೂ ಕೂಡ ಬಹಳ ವ್ಯಥೆಯನ್ನುಂಟುಮಾಡುವ ವಿಷಯ ಎಂದು ಹೇಳಬೇಕಾಗಿದೆ. ಸರ್ಕಾರದವರು, ಅನೇಕ ಸಂದರ್ಭಗಳಲ್ಲಿ ಕನ್ನಡ ಬೆರಳಚ್ಚು ಯಂತ್ರಗಳ ಅಭಾವ ಎನ್ನುವ ಸಬೂಬು ಹೇಳುತ್ತಾರೆ, ಬೆರಳಚ್ಚು ಯಂತ್ರಗಳು ಬಂದಾಗ ಬೆರಳಚ್ಚುಗಾರರು ಇಲ್ಲ

ಎನ್ನುವ ಸಬೂಬು ಹೇಳುತ್ತಾರೆ–ಹೀಗೆ ಇನ್ನು ಯಾವ ಯಾವದೋ ಸಬೂಬುಗಳನ್ನು ಹೇಳುತ್ತಿದ್ದಾರೆ. ಕನ್ನಡ ಬೆರಳಚ್ಚು ಯಂತ್ರಗಳು ಸಿಕ್ಕದೆ ಹೋದರೆ, ಅವುಗಳನ್ನು ತರಿಸುವುದಕ್ಕೆ ಏನು ತೊಂದರೆ ಇದೆ ? ಅದೂ ಕಷ್ಟವಾದರೆ, ಸರ್ಕಾರದವರು ಎಷ್ಟೋ ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತಾರೆ, ಹಾಗೆಯೇ ಕನ್ನಡ ಬೆರಳಚ್ಚಿನ ಯಂತ್ರದ ಕಾರ್ಖಾನೆಯನ್ನೂ ನಮ್ಮ ಸರ್ಕಾರದವರೇ ಸ್ಥಾಪನೆ ಮಾಡಬಹುದಾಗಿದೆ. ಕನ್ನಡ ಬೆರಳಚ್ಚು ಯಂತ್ರಕ್ಕೂ ಮತ್ತು ತೆಲುಗು ಬೆರಳಚ್ಚು ಯಂತ್ರಕ್ಕೂ ಅಷ್ಟೇನೂ ವ್ಯತ್ಯಾಸವಿಲ್ಲದಿರುವುದರಿಂದ, ತೆಲುಗಿನ ಬೆರಳಚ್ಚು ಯಂತ್ರಗಳನ್ನೂ ಈ ಕಾರ್ಖಾನೆಯಲ್ಲಿ ತಯಾರಿಸುವುದಕ್ಕೆ ಸಾಧ್ಯತೆ ಇದೆ. ಏನಾದರೂ ತೊಡಕುಗಳು ಬಂದರೆ, ಆ ತೊಡಕುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಜಾಗ್ರತರಾಗಿ ಯೋಚನೆ ಮಾಬೇಕೇ ಹೊರತು, ಸುಮ್ಮನೆ ವರ್ಷಂಪ್ರತಿ ತೆರಿಗೆಯಿಂದ ಬಂದ ಹಣವನ್ನು ಖರ್ಚು ಮಾಡುತ್ತಾ ಹೋದರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳಬೇಕಾಗಿದೆ.

ಇನ್ನು ನ್ಯಾಯಾಲಯಗಳಲ್ಲಿ ವ್ಯವಹಾರಗಳು ಕನ್ನಡದಲ್ಲಿ ನಡೆಯದೆ ಹೋದರೆ ಬಹಳ ಕಷ್ಟವಾಗುತ್ತದೆ. ನ್ಯಾಯಾಲಯದಲ್ಲಿ ಲಾಯರ್ ವಾದ ಮಾಡುವಾಗ, ಲಾಯರ್ ಕಡೆಯ ಕಕ್ಷಿದಾರನು, ತನ್ನ ಲಾಯರನ್ನು ಮಾಡುತ್ತಿರುವ ವಾದ ಸರಿಯಾದ ವಾದವೇ, ಮತ್ತು ಅದರಲ್ಲಿರುವ ಲೋಪದೋಷಗಳನ್ನು ತಿಳಿದು, ತನ್ನ ಕೇಸಿನಲ್ಲಿ ಹುರುಳಿಲ್ಲ ಎಂದು ಆತನಿಗೆ ಗೊತ್ತಾದ ಮೇಲೆ, ಆತ ಮುಂದಿನ ನ್ಯಾಯಾಲಯಕ್ಕೆ ಅಪೀಲ್ ಮಾಡುವುದಕ್ಕ ಹೋಗುವುದಿಲ್ಲ. ಲಾಯರ್ ಏನೋ ಇಂಗ್ಲೀಷಿನಲ್ಲಿ ದೊಡ್ಡದಾಗಿ ಹೇಳಿಬಿಡುತ್ತಾನೆ ನ್ಯಾಯಾಧೀಶರು ಸರಿಯಾಗಿ ತೀರ್ಪನ್ನು ಕೊಡಲಿಲ್ಲ ಎನ್ನುವ ಅಭಿಪ್ರಾಯ ಕಕ್ಷಿದಾರನಲ್ಲಿ ಬಂದು, ಅವನು ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗುವ ಪ್ರಮೇಯವಿರುತ್ತದೆ. ಆದುದರಿಂದ, ನ್ಯಾಯಾಲಯಗಳ ವ್ಯವಹಾರಗಳೂ ಕೂಡ ಕನ್ನಡದಲ್ಲಿ ಆಗುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರಿಂದ ಕಕ್ಷಿದಾರರಿಗೆ ತಮ್ಮ ಪ್ರಕರಣದಲ್ಲಿ ಏನು ವಾದ ನಡೆಯಿತು ಮತ್ತು ಏನು ತೀರ್ಪು ಕೊಟ್ಟರು ಎನ್ನುವುದನ್ನು ತಿಳಿಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಬಯಸುತ್ತೇನೆ.

ಮಾನ್ಯ ಮಂತ್ರಿಗಳು ಇಲ್ಲಿಯವರೆಗೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು ಎಂದು ನಾವು ಪ್ರಸ್ತಾಪಮಾಡಿದ ಸಂದರ್ಭದಲ್ಲಿ ನೀಡಿರುವ ಉತ್ತರಗಳ ಪಟ್ಟಿಯನ್ನು ಇಲ್ಲಿ ನಾನಿಟ್ಟುಕೊಂಡಿದ್ದೇನೆ. ಇವತ್ತು, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ, ಅವುಗಳನ್ನು ಪುನಃ ಹೇಳುವುದರಿಂದ, ನಾನು ಈಗ ಅವುಗಳನ್ನು ಓದುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ. ನಾವು ಅಂಥಾದ್ದು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಇಂಥಾದ್ದು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ಹೇಳುವುದರ ಬದಲು, ಇಲ್ಲಿಯವರೆಗೂ ನಾವು ಮಾಡಿದ ಪ್ರಯತ್ನಗಳ ಪರಿಣಾಮವೇನಾಯಿತು ; ನಾವು ಗುರಿ ಮುಟ್ಟುವುದಕ್ಕೆ ಸಾಧ್ಯವಾಯಿತೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ.

ಇದರ ಜೊತೆಗೆ ಕನ್ನಡ ಆಡಳಿತಭಾಷೆ ಯಾಗುವುದು ಎಷ್ಟು ಮುಖ್ಯವೋ ಅದಕ್ಕಿಂತ ಬಹಳ ಮುಖ್ಯವಾದುದು ಕನ್ನಡ ಮಾಧ್ಯಮಕ್ಕೆ ತಳಹದಿಯನ್ನು ವಿದ್ಯಾಶಾಲೆಗಳಲ್ಲಿ ಹಾಕುವುದು ಅಷ್ಟೇ ಮುಖ್ಯವಾದುದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂಗ್ಲೀಷಿನಲ್ಲಿ ವಿದ್ಯಾಭ್ಯಾಸ ಮಾಡಿಸುವುದು ಎಂದರೆ ನಮ್ಮ ತಂದೆತಾಯಿಗಳು ಹುಚ್ಚು ; ನಮ್ಮ ಮಕ್ಕಳಿಗೂ ಒಂದು ರೀತಿಯ ಭ್ರಮೆ ; ಇಂಗ್ಲೀಷಿನಲ್ಲಿ ವಿದ್ಯಾಭ್ಯಾಸ ಮಾಡುವುದರಿಂದ ದೊಡ್ಡ ಇಂಜಿನಿಯರ್ ಆಗುತ್ತೇವೆ ; ದೊಡ್ಡ ಡಾಕ್ಟರ್‌ಗಳು ಆಗುತ್ತೇವೆ ; ಇಂಗ್ಲೀಷ್ ಭಾಷೆಯಿಂದ ಎಷ್ಟೇ ತೊಂದರೆಯಾಗಲೀ, ಎಷ್ಟೇ ಕಷ್ಟವಾಗಲೀ ಅದನ್ನೇ ಬಯಸುತ್ತಾರೆ ; ಅವರ ಭ್ರಮೆಯನ್ನು ಹೋಗಲಾಡಿಸುವುದಕ್ಕೆ ಬ್ರಹ್ಮನೇ ಬರಬೇಕೇನೋ ನನಗಂತೂ ಅರ್ಥವಾಗುವುದಿಲ್ಲ. ಬೇರೆ ರಾಜ್ಯಗಳಲ್ಲಿ ಅನೇಕರೂ ಆ ರಾಜ್ಯದ ಭಾಷೆಯನ್ನು ಮಾಧ್ಯಮವನ್ನಾಗಿ ತೆಗೆದುಕೊಂಡು ; ಉತ್ತಮವಾದ ಅಂಕಗಳನ್ನು ಪಡೆದು ಐ ಎ ಎಸ್. ಮೊದಲಾದ ರಾಷ್ಟ್ರಮಟ್ಟದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರತಕ್ಕಂಥ ನಿದರ್ಶನ ಇದೆ ; ಡಾಕ್ಟರುಗಳು ಆಗಿರತಕ್ಕಂಥ ನಿದರ್ಶನ ಇವೆ. ಪ್ರಾರಂಭದಲ್ಲಿ ಅನೇಕ ತೊಡಕುಗಳು ಬರಬಹುದು ; ಕೆಲವು ಪದಗಳ ಬಳಕೆಯಲ್ಲಿ ಕಷ್ಟವಾಗಬಹುದು ; ಆದರೆ ಜನಗಳಿಗೆ ಅರ್ಥವಾಗುವ ರೀತಿಯಲ್ಲಿ ಭಾಷೆಯನ್ನು ಬಳಸಬೇಕು ; ಉದಾಹರಣೆಗೆ ರೈಲು ಎಂದು ಇದೆ ; ಇಂಥಾದ್ದನ್ನು ರೈಲು ಎಂದೇ ಉಪಯೋಗಿಸುವುದಕ್ಕೆ ಏನು ಕಷ್ಟವಾಗುವುದಿಲ್ಲ. ಬೇರೆ ಭಾಷೆಯಲ್ಲಿಯೇ ಆಗಲೀ, ಉರ್ದು, ಇಂಗ್ಲಿಷ್, ಹಿಂದಿಯಲ್ಲಿ ಕೆಲವು ಪದಗಳನ್ನು ಉಪಯೋಗಿಸಿಕೊಂಡು ಸರಳವಾಗಿ ಅರ್ಥವಾಗುವ ರೀತಿಯಲ್ಲಿ ಬಳಸಿಕೊಂಡು ಹೋಗಬಹುದು ; ಜನಸಾಮಾನ್ಯರಿಗೆ ತಿಳಿಯುವ

ರೀತಿಯಲ್ಲಿ ಕನ್ನಡ ಭಾಷೆಯನ್ನು ಬಳಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸ್ಪಷ್ಟವಾಗಿ ಹೇಳುತ್ತೇನೆ. ಒಂದು ಮಾತನ್ನು ಹೇಳುತ್ತೇನೆ; ನನಗೆ ವಯಸ್ಸಾಗಿರುವುದರಿಂದ ತಪ್ಪನ್ನು ಒಪ್ಪಿಕೊಂಡರೆ ತಪ್ಪಾಗುವುದಿಲ್ಲ, ನನಗೆ ಕನ್ನಡ ಭಾಷೆಯ ಬರವಣಿಗೆಯನ್ನು ಸರಿಯಾಗಿ ಬರೆಯುವುದಕ್ಕೆ ಬರುವುದಿಲ್ಲ. ಹಿಂದಿನ ಕಾಲದಲ್ಲಿ ಶಾಲೆಗಳಲ್ಲಿ ಮಕ್ಕಳಿಗೆ ಬರವಣಿಗೆ ಉಕ್ತಲೇಖನ ಬರಸುತ್ತಿದ್ದರು; ಸರಿಯಾದ ರೀತಿಯಲ್ಲಿ ಕನ್ನಡ ಭಾಷೆಯನ್ನು ಬರೆಸುವುದಕ್ಕೆ; ಹಾಗೂ ಅಭ್ಯಾಸ ಮಾಡತಕ್ಕಂಥಾದ್ದಕ್ಕೆ ಸಾಕಾದಷ್ಟು ಉತ್ತೇಜನ ಕೊಡಬೇಕಾದುದು ಅವಶ್ಯಕತೆ ಇದೆ. ಪ್ರಾಥಮಿಕ ಶಾಲೆಯ ಮಟ್ಟದಲ್ಲಿ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಕನ್ನಡ ಭಾಷೆಯನ್ನು ಅಭ್ಯಾಸ ಮಾಡತಕ್ಕಂಥಾದ್ದಕ್ಕೆ ವಿದ್ಯಾ ಇಲಾಖೆಯವರು ಸಾಕಷ್ಟು ತಳಹದಿ ಹಾಕುವುದಕ್ಕೆ ಶ್ರಮ ಪಡಬೇಕು. ಸಾಕಷ್ಟು ಪರಿಣತೆಯಿಂದ ಕನ್ನಡ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಬರೀ ವಿದ್ಯಾಭ್ಯಾಸ ಕೊಡುತ್ತೇವೆಂದು ಕನ್ನಡದಲ್ಲಿ ಹೇಳಿಬಿಟ್ಟರೆ ಆಗುವುದಿಲ್ಲ; ಇದರ ಕಡೆ ಸರ್ಕಾರ ತಮ್ಮ ಗಮನವನ್ನು ಹರಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕನ್ನಡ ಭಾಷೆ ಮಾಧ್ಯಮವಾಗುವುದರಿಂದ ವಿದ್ಯಾರ್ಥಿಗೆ ವಿಷಯ ಅರ್ಥವಾಗುವುದಲ್ಲದೆ; ಸಾಕಷ್ಟು ಕಾಲ ಉಳಿಯುತ್ತದೆ; ಇಂಗ್ಲೀಷಿನಲ್ಲಿ ಆದರೆ ಪಾಠಗಳನ್ನು ಉರಲು ಹೊಡೆಯಬೇಕಾಗುತ್ತದೆ. ಕನ್ನಡದಲ್ಲಿ ಪಾಠದ ವಿಷಯ ಏನು ಎಂದು ಅರ್ಥ ಮಾಡಿಕೊಂಡು ಬರೆಯುತ್ತಾನೆ ಅಲ್ಲದೆ ಖರ್ಚು ಸಾಕಷ್ಟು ಕಡಿಮೆಯಾಗುವುದಲ್ಲದೆ; ಉಪಾಧ್ಯಾಯರು ಹೇಳಿದ ಪಾಠವನ್ನು ಸುಲಭವಾಗಿ ಗ್ರಹಿಸುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದೇ ಇಂಗ್ಲೀಷ್ ಮಾಧ್ಯಮದ ತರಗತಿಗಳಲ್ಲಿ ಫೀಜು ತಿಂಗಳಿಗೆ 40–50 ರೂ. ಬರುತ್ತದೆ; ಕನ್ನಡ ಮಾಧ್ಯಮದಲ್ಲಿ ಫೀಜು ಇರುವುದಿಲ್ಲ; ಖರ್ಚು ಕಡಿಮೆಯಾಗುತ್ತದೆ. ಆದಷ್ಟು ಬೇಗ ನಾವು ಕನ್ನಡ ಭಾಷೆಗೆ ಶ್ರೇಷ್ಠತೆ ಕೊಡದೇ ಹೋದರೆ; ಕನ್ನಡಕ್ಕೆ ದ್ರೋಹ ಮಾಡಿದಂತಾಗುತ್ತದೆ; ಅಲ್ಲದೆ ನಾವು ಕನ್ನಡ ಮಕ್ಕಳು ಅನ್ನಿಸಿಕೊಳ್ಳುವುದಕ್ಕೆ ಅರ್ಹತೆ ಇರುವುದಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೂ ಭಾಷೆಯ ಬಗ್ಗೆ ಹೆಚ್ಚು ಹೇಳದೆ ನಾವು ಹೊಸದಾಗಿ ಮಸೂದೆಗಳನ್ನು ಮತ್ತು ಕಾಯಿದೆಗಳನ್ನು ಹಾಗೂ ನಿಯಮಾವಳಿಯನ್ನು ಏನು ತರುತ್ತೇವೆ ಅವು ಎಲ್ಲವೂ ಇಂಗ್ಲೀಷಿನಲ್ಲಿಯೇ ಬರುತ್ತವೆ; ಇನ್ನು ಮೇಲೆ ಪ್ರತಿಯೊಂದು ಮಸೂದೆಗಳ ಇನ್ನಿತರ ಸರ್ಕಾರಿ ಕಾರ್ಯಕಲಾಪಗಳು ಕನ್ನಡದಲ್ಲಿಯೂ ತರ್ಜುಮೆ ಮಾಡಿಸಿದರೆ ಅದರ ತತ್ವ ನಮಗೆ ಅರ್ಥವಾಗುತ್ತದೆ. ಯಾವುದೋ ಕಾಲದಲ್ಲಿದ್ದದ್ದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಮುಂದೆ ಬರತಕ್ಕಂಥ ಮಸೂದೆಗಳು; ನಿಯಮಾವಳಿಗಳು ಎಲ್ಲವನ್ನೂ ಪೂರ್ತಿಯಾಗಿ ಕನ್ನಡದಲ್ಲಿ ಅಚ್ಚುಹಾಕಿಸಿ ಸಭೆಯ ಮುಂದೆ ಇಟ್ಟರೆ ಸ್ವಲ್ಪ ಹೆಚ್ಚಿನ ಅನುಕೂಲವಾಗುತ್ತದೆಂದು ಸಲಹೆಯನ್ನು ಕೊಡುತ್ತೇನೆ. ಎರಡನೆಯದಾಗಿ ಸರ್ಕಾರಿ ಆದೇಶ ಮತ್ತಿತರ ಆಜ್ಞೆಗಳನ್ನು ಮೇಲಿಂಗಡೆಯಿಂದ ಕಳುಹಿಸುವಾಗಲೇ ಕನ್ನಡದಲ್ಲಿ ಕಳುಹಿಸಿದರೆ; ಕೆಳಗಿನವರು ಕನ್ನಡದಲ್ಲಿಯೇ ಜವಾಬು ಬರೆಯುವುದಕ್ಕೆ ಅನುಕೂಲವಾಗುತ್ತದೆ; ಆದುದರಿಂದ ಸರ್ಕಾರಿ ಆಜ್ಞೆಗಳನ್ನು ಕನ್ನಡದಲ್ಲಿಯೇ ಕಳುಹಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಸರ್ಕಾರಿ ಅಧಿಕಾರಿಗಳಿಗೆ ನೀವು ಕನ್ನಡದಲ್ಲಿ ವ್ಯವಹಾರ ನಡೆಸದೇ ಹೋದ ಪಕ್ಷದಲ್ಲಿ ನಿಮಗೆ ಇಂಥ ದಂಡವನ್ನು ಇಂಥ ಪ್ರಮೋಷನನ್ನು ನಿಲ್ಲಿಸುತ್ತೇವೆನ್ನುವ ಎಚ್ಚರಿಕೆಯನ್ನು ಕೊಡಬೇಕೆಂದು ಕೂಡ ಹೇಳುತ್ತೇನೆ. ಅಲ್ಲದೇ ಕೋರ್ಟುಗಳಲ್ಲಿ ಕನ್ನಡ ಭಾಷೆಯಲ್ಲಿಯೇ ವ್ಯವಹಾರ ಮಾಡಬೇಕಾಗುತ್ತದೆ; ಇದರ ಜೊತೆಗೆ; ಆರು ತಿಂಗಳಿಗೊಂದು ಸಾರಿ ಮೂರು ತಿಂಗಳಿಗೊಂದು ಸಾರಿ ಕನ್ನಡದ ಕೆಲಸ ಎಷ್ಟರಮಟ್ಟಿಗೆ ನಡೆದಿದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ; ಹೀಗೆ ಮಾಡುವುದರಿಂದ ಅಧಿಕಾರಿ ವರ್ಗದಲ್ಲಿ ಒಂದು ರೀತಿಯ ಎಚ್ಚರಿಕೆ ಇರುತ್ತದೆ. ಬೆರಳಚ್ಚು ಯಂತ್ರದ ಬಗ್ಗೆ ಇರತಕ್ಕ ತೊಡಕುಗಳನ್ನು ನಿವಾರಿಸುವುದಲ್ಲದೇ ಕನ್ನಡ ಭಾಷೆಯ ಪ್ರಚಾರಕ್ಕೆ ಸಾಕಷ್ಟು ಗಮನ ತೆಗೆದುಕೊಳ್ಳಬೇಕು. ಕನ್ನಡ ಭಾಷೆಯ ಪಠ್ಯಪುಸ್ತಕಗಳು ಸಾಧ್ಯವಾದಷ್ಟು ಉತ್ತಮ ದರ್ಜೆಯ ಪಠ್ಯ ಪುಸ್ತಕಗಳು ಇರಬೇಕು; ಕನ್ನಡ ಮಾಧ್ಯಮದಲ್ಲಿ ಹೆಚ್ಚಿನ ಅಂಕಗಳನ್ನು ತೆಗೆದುಕೊಂಡು ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಪುರಸ್ಕಾರ ಮಾಡುತ್ತೇವೆನ್ನುವ ತೀರ್ಮಾನ ತೆಗೆದುಕೊಂಡರೆ; ಮಕ್ಕಳು ಹೆಚ್ಚು ಹೆಚ್ಚು ಕನ್ನಡ ಮಾಧ್ಯಮವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಕನ್ನಡದಲ್ಲಿ ಪಾಸಾಗಿರುವ ವಿದ್ಯಾರ್ಥಿಗಳಿಗೆ ಕೆಲಸ ಕೊಡುವಾಗ ಹೆಚ್ಚಿನ ಅವಕಾಶ ಕೊಡುವುದರಿಂದಲೂ ಅನುಕೂಲವಾಗುತ್ತದೆ. ಕನ್ನಡ ಟೈಪ್‌ರೈಟರ್ ಕಲಿಸಿಕೊಡಲು

ವಾಣಿಜ್ಯಶಾಲೆಗಳಿಗೆ ಅವಕಾಶ ಇದೆ; ವಾಣಿಜ್ಯಶಾಲೆಗಳಿಗೆ ಸರ್ಕಾರ ಯಾವ ಬೆಲೆ ತೆತ್ತು ಟೈಪ್‌ರೈಟರ್‌ಗಳನ್ನು ಕೊಳ್ಳುತ್ತದೋ ಅದೇ ಬೆಲೆಗೆ ವಾಣಿಜ್ಯ ಶಾಲೆಗಳಿಗೂ ಸಿಗುವಂತೆ ಏರ್ಪಾಡು ಮಾಡಬೇಕು. ಈ ದಿಸೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಾಕಾದಷ್ಟು ಕೆಲಸ ಮಾಡುತ್ತಿದೆ; ಪರಿಷತ್ತಿನ ಅಧ್ಯಕ್ಷರವರು ಕೂಡ ಕನ್ನಡ ವಿಶ್ವ ಸಮ್ಮೇಳನವನ್ನು ಮಾಡಬೇಕೆಂದು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ; ತಮಿಳುನಾಡು ಹಾಗೂ ಬೇರೆ ಬೇರೆ ಕಡೆಗಳಲ್ಲಿ ಮಾಡಿದ್ದಾರೆ; ಈ ಸಮ್ಮೇಳನಕ್ಕೆ ಸಾಕಾದಷ್ಟು ಸಹಾಯವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಕನ್ನಡ ಮಾಧ್ಯಮದ ಬಗ್ಗೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3-00 P.M.

[MR. DEPUTY SPEAKER in the chair]

† ಶ್ರೀ ಎಸ್. ಎಂ. ಶೀಗನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶಾಮಣ್ಣನವರು ತಂದಿರತಕ್ಕಂಥಾ ಈ ಒಂದು ರೆಸಲ್ಯೂಷನ್ ಅನ್ನು ನಾನು ಸ್ವಾಗತಿಸುತ್ತೇನೆ. ಈ ಕನ್ನಡದ ಬಗ್ಗೆ ಹೇಳುವುದಾದರೆ ನಮ್ಮ ದೇಶದಲ್ಲಿ ಅವ್ಯಾಹತವಾಗಿ ದುಡಿದಂತ ಹೆಸರಾಂತ ಕವಿಗಳು ಈ ಕನ್ನಡಿಗರಿಗೆ ದುಡಿದಿದ್ದಾರೆ ಅಷ್ಟೇ ಅಲ್ಲದೆ ನಮ್ಮ ದೇಶ ಪರಕೀಯರಿಗೆ ದಾಸರಾದಂಥಾ ಕಾಲದಲ್ಲೂ ಕೂಡ ನಮ್ಮ ದೇಶದಲ್ಲಿ ಕನ್ನಡ ಇರಬೇಕು ಅನ್ನುವ ತಪಸ್ಸು ಮಾಡಿ ಬಹಳ ಮಟ್ಟಿಗೆ ಆಚರಿಸಿಕೊಂಡು ಬಂದಿದ್ದಾರೆ. ಹೀಗಿರುವಾಗ ಸ್ವಾತಂತ್ರ್ಯ ಬಂದಮೇಲೆ ಈ ಕನ್ನಡವನ್ನು ಆಚರಣೆಗೆ ಏತಕ್ಕೆ ತರುವುದಕ್ಕೆ ಆಗಲಿಲ್ಲವೋ ನನಗೆ ತಿಳಿಯದು. ಈ ಬಗ್ಗೆ ನಾನು ಹೇಳಬೇಕಾದರೆ ಈ ಕನ್ನಡದ ಬಗ್ಗೆ ಮಾಡುವಂಥಾ ಕೆಲಸ ಅಷ್ಟಾಗಿ ಸಾಲದು, ಎನ್ನುವುದು ಬಹಳ ಜನರ ಮನಸ್ಸಿನಲ್ಲಿದೆ. ಇದರಲ್ಲಿ ಒಂದು ಸಂತೋಷದ ಸುದ್ದಿ ಏನೆಂದರೆ ನಮ್ಮ ಸರ್ಕಾರ ಬಂದ ಮೇಲೆ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟು ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರನ್ನು ಇಡುವಂಥ ಒಂದು ಮಹತ್ಕಾರ್ಯವನ್ನು ಮಾಡಿದೆ. ಈ ಬಗ್ಗೆ ಎಷ್ಟು ಕೆಲಸ ಮಾಡಿದರೂ ಕೂಡ ಸಾಲದು; ಅನ್ನುವ ಒಂದು ಮನೋಭಾವ ಬಹಳ ಜನರ ಮನಸ್ಸಿನಲ್ಲಿದೆ. ಈ ಬಗ್ಗೆ ಸರ್ಕಾರದವರು ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಾ ಬಂದಿದ್ದರೂ ಸಹ ಸಾಲದು. ಈ ಬಗ್ಗೆ ನಾನು ಹೇಳಬೇಕಾದರೆ ಹಿಂದೆ ಇದ್ದಂತೆ ಈವೊತ್ತು ಇಲ್ಲ. ಉದಾಹರಣೆ ಹೇಳುವುದಾದರೆ ನಾನು ವಿದ್ಯಾರ್ಥಿಯಾಗಿದ್ದಾರೆ ಇದೇ ಬೆಂಗಳೂರಿನಲ್ಲಿ ಮಹಾತ್ಮಾಗಾಂಧಿ ರೋಡಿನಲ್ಲಿ ಯಾವನಾದರೂ ಒಬ್ಬ ಕನ್ನಡದಲ್ಲಿ ಮಾತನಾಡಿದರೆ ಅವಮಾನ ಅನ್ನುವ ಒಂದು ಪರಿಸ್ಥಿತಿ ಇತ್ತು. ಈವೊತ್ತಿನ ದಿವಸ ಕನ್ನಡದಲ್ಲಿ ಮಾತನಾಡಿದರೆ ಹಿಂದಿನ ಒಂದು ಪರಿಸ್ಥಿತಿ ಇಲ್ಲ ಆವೊತ್ತಿನ ದಿವಸ ಯಾವನಾದರೂ ಕನ್ನಡದಲ್ಲಿ ಮಾತನಾಡಿದರೆ ಅವನು ಅನಾಗರಿಕ ಎಂದು ಅವನನ್ನು ಒಂದು ಕ್ಷುಲ್ಲಕ ರೀತಿಯಿಂದ ನೋಡುತ್ತಿದ್ದರು. ಈವೊತ್ತಿನ ದಿವಸ ಅಂಥಾ ಒಂದು ಪರಿಸ್ಥಿತಿ ಇಲ್ಲ. ಈವೊತ್ತಿನ ದಿವಸ ಬಹಳಷ್ಟು ಬದಲಾವಣೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಕನ್ನಡಿಗರಾದ ನಾವು ಬಹಳ ಉದಾರಿಗಳು ಎಲ್ಲರನ್ನೂ ಸ್ವಾಗತಿಸತಕ್ಕಂಥಾ ಉದಾರ ಮನಸ್ಸು ನಮ್ಮದು. ಇದರಿಂದ ಏನಾಗಿದೆ ಎಂದರೆ ನಮ್ಮ ಕನ್ನಡಕ್ಕೆ ಒಂದು ಹಿಡಿತ ಇಲ್ಲದಂತಾಗಿದೆ. ತಮಗೆ ಹೇಳಬೇಕಾದರೆ ತಮಿಳ್‌ನಾಡು ತೆಗೆದುಕೊಳ್ಳಿ. ಅಲ್ಲಿ ತಮಿಳು ಚಿತ್ರ ಮತ್ತು ಹಿಂದಿ ಬಿಟ್ಟರೆ ದೇಶೀಯ ಭಾಷೆ ಚಿತ್ರ ಹಾಕುವುದು ಕಷ್ಟ. ತಮಿಳುನಾಡಿನಲ್ಲಿ 2½ ಲಕ್ಷ ಕನ್ನಡಿಗರು ಇದ್ದರೂ ಸಹ ಅವರು ಒಂದು ಕನ್ನಡ ಚಿತ್ರ ನೋಡಬೇಕಾದರೆ ಕಷ್ಟ. ಹಾಗೆಯೇ ಮುಂಬೈ ತೆಗೆದುಕೊಂಡರೆ ಅಲ್ಲಿ ಸುಮಾರು 6-7 ಲಕ್ಷ ಜನ ಕನ್ನಡಿಗರು ಇದ್ದರೂ ಸಹ ಅವರು ಒಂದು ಕನ್ನಡ ಚಿತ್ರವನ್ನು ನೋಡುವುದು ಕಷ್ಟ. ಹೀಗಾದರೂ ನಾವು ಇಲ್ಲಿ ಬಹಳ ಉದಾರಿಗಳಾಗಿದ್ದೇವೆ. ಇಲ್ಲಿ ನಮ್ಮ ರಾಜ್ಯದಲ್ಲಿ ನಾವು ಎಲ್ಲಾ ಭಾಷೆಗಳಿಗೂ ಆಶೀರ್ವಾದ ಮಾಡಿಕೊಂಡು ಬಂದಿದ್ದೇವೆ. ಅಂಥಾ ಒಂದು ದೊಡ್ಡ ಮನಸ್ಸಿನ ಜನ ನಾವಾಗಿದ್ದೇವೆ ನಾನು ಹೇಳುತ್ತೇನೆ ಈವೊತ್ತು ಏನಾದರೂ ಒಂದು ವಿಷಯ ನಮ್ಮದು ಅಂತ ಮಾತನಾಡಿದರೆ ಅದಕ್ಕೆ ಒಂದು ಕೆಟ್ಟ ಶಬ್ದವನ್ನು ಕೊಡುತ್ತಾರೆ, ಅವನು ಒಬ್ಬ ಸಣ್ಣ ಮನುಷ್ಯ ಅಂತಲೋ, ಅವನು ಒಬ್ಬ ನ್ಯಾರೋ ಮೈಂಡೆಡ್ ಮ್ಯಾನ್ ಅಂತಲೋ ಏನಾದರೂ ಒಂದು ಹೇಳುತ್ತಾರೆ. ಅವರಿಗೆ ಅಷ್ಟು ವಿಶಾಲವಾದ ಮನಸ್ಸು ಇಲ್ಲ; ಎನ್ನುವ ಅಪವಾದನೆ ನಮ್ಮ ಮೇಲೆ ಬರುತ್ತದೆ.

ಇದು ಸಹಜವೇ ಆಗಿದೆ. ಇದನ್ನು ತಾವು ಮರೆಯಬಾರದು. ಹಿಂದೆ ಇಂಗ್ಲೀಷರ ಕಾಲದಲ್ಲೂ ಕೂಡ ಕರ್ನಾಟಕದಲ್ಲಿ ಕನ್ನಡ ಸಾಹಿತ್ಯ ಎಷ್ಟರಮಟ್ಟಿಗೆ ಬೆಳೆದುಕೊಂಡು ಬಂದಿತ್ತು ಎಂದರೆ ಇಲ್ಲಿ ಕುರಿ ಕಾಯುತ್ತಾ ಇರತಕ್ಕಂಥಾ ಜನರು ಇದ್ದರೂ ಕೂಡ ಅಂಥಾ ಕಾಲದಲ್ಲೂ ಇಲ್ಲಿ ಉತ್ತಮವಾದ ಸಾಹಿತ್ಯ ಇತ್ತು ಎನ್ನುವುದು ಬೆಳಕಿಗೆ ಬಂದಿದೆ. ನಮ್ಮ ಕರ್ನಾಟಕದಲ್ಲಿ ರನ್ನ ಪಂಪ ಈ ರೀತಿ ದೊಡ್ಡ ದೊಡ್ಡ ಕವಿಗಳು ಆಗಲೇ ಹುಟ್ಟಿದರು. ಈ ದೇಶದಲ್ಲಿ ಹಿಂದೆ ಇಂಗ್ಲೀಷ್ ಬಳಕೆಗೆ ಬಂದಿದ್ದರೂ ಕೂಡ ನಮ್ಮ ಕನ್ನಡ ಶಬ್ದ ಏನು ಇತ್ತೋ ಅದಕ್ಕೆ ತಲೆತಗ್ಗಿಸಬೇಕಾಗಿರಲಿಲ್ಲ. ಇದು ಒಂದು ಹೆಮ್ಮೆಯ ವಿಷಯ. ಅಂಥಾ ಒಂದು ಪರಂಪರೆ ಅಂಥಾ ಒಂದು ಇತಿಹಾಸ ನಮ್ಮ ಕರ್ನಾಟಕದಲ್ಲಿ ಇತ್ತು. ಅಂಥಾವರು ನಮ್ಮ ದೇಶಕ್ಕೆ ಒಳ್ಳೆಯ ಕೆಲಸವನ್ನು ಮಾಡಿ ಹೋಗಿದ್ದಾರೆ, ದೇಶಕ್ಕೆ ಒಳ್ಳೆಯ ಸಾಹಿತ್ಯವನ್ನು ಕೊಟ್ಟು ಹೋಗಿದ್ದಾರೆ, ದೇಶಕ್ಕೆ ಒಳ್ಳೆಯ ಸಂಸ್ಕೃತಿಯನ್ನು ಕೊಟ್ಟು ಹೋಗಿದ್ದಾರೆ. ಹೀಗಿದ್ದ ಮೇಲೆ ನಾವು ಏಕೆ ಸಣ್ಣ ಮನುಷ್ಯರಾಗಬೇಕು? ಇಂಥಾ ಒಂದು ಸಂಸ್ಕೃತಿ ಇಂಥಾ ಒಂದು ಸಾಹಿತ್ಯ ನಮ್ಮಲ್ಲಿ ಇರುವಾಗ ನಾವೇಕೆ ಸಂಕುಚಿತ ಮನೋಭಾವ ಇಟ್ಟುಕೊಳ್ಳಬೇಕು? ನಾವೇಕೆ ಸಂಕುಚಿತ ಮನೋಭಾವ ಎಂದು ವ್ಯಾಖ್ಯಾನ ಮಾಡಬೇಕು? ಬೇರೆಯವರು ಇದನ್ನು ಎತ್ತಿ ಹಿಡಿದರೂ ಕೂಡ ನಾವು ಸಂಕುಚಿತರು ಅಂತ ಆಗುವುದಿಲ್ಲ. ಅವರು ಒಂದುವೇಳೆ ಆರೀತಿ ಹೇಳಿದರೂ ಕೂಡ ಅದು ಹಾಸ್ಯಾಸ್ಪದವಾಗುತ್ತದೆ. ಈವೊತ್ತು ಉತ್ತರ ಪ್ರದೇಶ ತೆಗೆದುಕೊಳ್ಳಿ, ಮಧ್ಯಪ್ರದೇಶ ತೆಗೆದುಕೊಳ್ಳಿ, ಬಿಹಾರ ತೆಗೆದುಕೊಳ್ಳಿ ಎಲ್ಲಾ ಕಡೆಗಳಲ್ಲೂ ಕಾಲೇಜಿನಲ್ಲಿ ಶಿಕ್ಷಣ ಮಾಧ್ಯಮ ಹಿಂದಿ ತಂದಿದ್ದಾರೆ. ತಮಿಳ್‌ನಾಡಿನಲ್ಲಿ ಶಿಕ್ಷಣ ಮಾಧ್ಯಮ ತಮಿಳು ತಂದಿದ್ದಾರೆ. ಹೀಗಿರುವಾಗ ನಮ್ಮ ಕರ್ನಾಟಕದಲ್ಲಿ ನೋಡಿದರೆ ಸರ್ವಾಂಗೀಕರಣವಾಗಿ ಈ ಕನ್ನಡ ಭಾಷೆಯನ್ನು ಏತಕ್ಕೆ ಶಿಕ್ಷಣ ಮಾಧ್ಯಮವನ್ನಾಗಿ ತರುವುದಕ್ಕೆ ಕಷ್ಟಪಡುತ್ತಾರೋ ಗೊತ್ತಿಲ್ಲ. ಕನ್ನಡದಲ್ಲಿ ಬೇಕಾದ ಭಾಷೆ ಇಲ್ಲವೇ, ಕನ್ನಡ ಸಾಕಷ್ಟು ಬೆಳೆದಿಲ್ಲವೇ? ಈ ವಿಚಾರದ ಕಡೆಗೆ ಸರ್ಕಾರ ಏತಕ್ಕೆ ಗಮನ ಕೊಡುತ್ತಾ ಇಲ್ಲ? ಇದಕ್ಕೆ ಕಾರಣ ನಮ್ಮಲ್ಲಿ ರೂಢಮೂಲವಾಗಿ ಬೆಳೆದು ಬಂದಿರುವುದು ಒಂದು ಮಾನಸಿಕ ವ್ಯಾಮೋಹ, ಈ ಒಂದು ಮಾನಸಿಕ ವ್ಯಾಮೋಹ ಇಂಗ್ಲೀಷ್ ಮೇಲೆ ಹೋಗಿದೆ. ಇಂಗ್ಲೀಷ್‌ನಲ್ಲಿ ಮಾತನಾಡಿದರೆ, ಇಂಗ್ಲೀಷರಂತೆ ನಡೆದುಕೊಂಡರೆ, ಇಂಗ್ಲೀಷರ ಹಾಗೆ ಟೈ ಕಟ್ಟಿದರೆ ನಾವು ಒಬ್ಬರು ದೊಡ್ಡ ಮನುಷ್ಯರು ಅಂತ ಮನಸ್ಸಿಗೆ ಒಂದು ರೀತಿ ವ್ಯಾಮೋಹ ಬೆಳೆದು ಬಂದಿದೆ. ಈ ಒಂದು ವ್ಯಾಮೋಹ ಇದೆಯಲ್ಲಾ ಇದು ಹೋಗಬೇಕು. ಅದು ಹೋಗಿ ನಮ್ಮ ಮನಸ್ಸಿನಲ್ಲಿ ನಾವು ಕನ್ನಡದಲ್ಲೇ ಮಾತನಾಡಬೇಕು ಅನ್ನುವ ಒಂದು ಚಿಂತನೆ ಬರಬೇಕು ಎಲ್ಲಿಯವರೆಗೆ ಈ ಚಿಂತನೆ ಬರುವುದಿಲ್ಲವೋ, ಎಲ್ಲಿಯವರೆಗೂ ಈ ಬಗ್ಗೆ ಒಂದು ಆಕಾಂಕ್ಷೆ ಬರುವುದಿಲ್ಲವೋ ಅಲ್ಲಿಯವರೆಗೂ ನಮ್ಮ ದೇಶದಲ್ಲಿ ಕನ್ನಡ ಅಭಿವೃದ್ಧಿಯಾಗುವುದಿಲ್ಲ; ಅಲ್ಲಿಯವರೆಗೂ ನಾವು ಕನ್ನಡ ನೆಲಕ್ಕೆ ಸೇರುವುದಿಲ್ಲ. ನಮ್ಮ ದೇಶವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕಾದರೆ ಮೊದಲು ನಮ್ಮ ಮನೆಯನ್ನು ಚೆನ್ನಾಗಿ ಇಟ್ಟುಕೊಂಡರೆ ನಂತರ ಊರು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಊರು ಚೆನ್ನಾಗಿ ಆದರೆ ನಂತರ ದೇಶವೂ ಚೆನ್ನಾಗಿ ಬೆಳೆಯುತ್ತದೆ. ಆ ರೀತಿಯಾಗಿ ಮೊದಲು ನಮ್ಮ ಮನೆ ಬಗ್ಗೆ ಚಿಂತನೆ ಮಾಡಬೇಕು. ಈ ರೀತಿಯಾಗಿ ಮೊದಲು ತಮ್ಮ ಮನೆಯನ್ನು ಚೆನ್ನಾಗಿ ಇಟ್ಟುಕೊಳ್ಳುವುದಕ್ಕೆ ಆಗದೇ ಹೋದರೆ ಇನ್ನಾವರೀತಿ ಅವರು ದೇಶವನ್ನು ಆಳುತ್ತಾರೋ, ಇನ್ನಾವ ರೀತಿ ಒಂದು ಸಮಾಜವನ್ನು ಕಟ್ಟುತ್ತಾರೋ ನನಗಂತೂ ಗೊತ್ತಿಲ್ಲ. ನಾನು ಕೇಳುತ್ತೇನೆ ನಮ್ಮ ಭಾಷೆ ಬಗ್ಗೆ, ನಮ್ಮ ಸಂಸ್ಕೃತಿ ಬಗ್ಗೆ ಸ್ವಾಭಿಮಾನ ಅವರಿಗೆ ಇಲ್ಲದೇ ಹೋದರೆ ಅಂಥಾ ಜನರಿಂದ ನಮ್ಮ ರಾಜ್ಯಕ್ಕೆ ಅವರ ಕೊಡುಗೆ ಏನು ಎಂದು. ಈ ದೃಷ್ಟಿಯಿಂದ ನಾವು ಭಾವಿಸಬೇಕಾಗುತ್ತದೆ. ಆದರೆ ನಮ್ಮ ಈ ಸರ್ಕಾರದಲ್ಲಿ ನಮಗೆ ಒಂದು ಭರವಸೆ ಇದೆ. ಹಿಂದೆ ಈ ಒಂದು ಭರವಸೆ ಇರಲಿಲ್ಲ. ಹಿಂದೆ ಇದ್ದವರು ಯಾರೂ ಕೂಡ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟಿರಲಿಲ್ಲ. ಈವೊತ್ತು ನಮ್ಮ ಸರ್ಕಾರ ಈ ಬಗ್ಗೆ ಒಂದು ದಿಟ್ಟ ಹೆಜ್ಜೆ ತೆಗೆದುಕೊಂಡು ನಮ್ಮ ಸರ್ಕಾರ ಈ ಬಗ್ಗೆ ಒಂದು ದಿಟ್ಟ ಹೆಜ್ಜೆ ತೆಗೆದುಕೊಂಡು ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿತು. ಆದುದರಿಂದ ನಮಗೆ ಇನ್ನು ಮುಂದೆ ಈ ಕನ್ನಡಕ್ಕೂ ಕೂಡ ಒಂದು ಹೆಚ್ಚಿನ ಪ್ರಾಶಸ್ತ್ಯ ಸಿಕ್ಕುತ್ತದೆ ಎಂದು ತಿಳಿದುಕೊಂಡಿದ್ದೇವೆ. ಇದು ಎಲ್ಲಾ ರಂಗದಲ್ಲೂ ಹರಡಬೇಕಾಗಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತು ಕೇಳುತ್ತೇನೆ. ಅಸಿಸ್ಟೆಂಟ್ ಕಮೀಷನರನ್ನೂ, ಡೆಪ್ಯೂಟಿ ಕಮೀಷನರನ್ನು ಬಿಹಾರ, ಒರಿಸ್ಸಾ ಇನ್ನು ಇತರ ಕಡೆಗಳಿಂದ ತಂದು ಈ ರಾಜ್ಯಕ್ಕೆ ಏನು

ಹಾಕುತ್ತಾರೆ ಅವರಿಗೆ ಇಲ್ಲಿ ಕನ್ನಡ ಕಲಿಯಬೇಕು ಅನ್ನುವ ಒಂದು ಭಾವೋತ್ಪಾಟನೆ ಇಲ್ಲವೇ ? ಅಲ್ಲಿಂದ ಬಂದವರು ಕನ್ನಡವನ್ನು ಎಷ್ಟು ಜವ ತಿಳಿದುಕೊಂಡಿದ್ದಾರೆ. ಆ ಅಧಿಕಾರಿಗಳಿಗೆ ಕನ್ನಡ ಕಲಿಯುವುದಕ್ಕೆ ಆಸಕ್ತಿ ಇಲ್ಲದೆ ಹೋದರೆ, ಕನ್ನಡ ಕಲಿಯುವೇ ಹೋದರೆ ನಮ್ಮ ರಾಜ್ಯದಲ್ಲಿ ಹಳ್ಳಿಗಾಡಿನಲ್ಲಿರತಕ್ಕಂಥ ಜನರು ಎಷ್ಟು ತೊಂದರೆಪಡಬೇಕಾಗುತ್ತದೆ ಅನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ.

ಇನ್ನೂ ಕೂಡ ಥ್ಯಾಂಕ್ಸ್ ಎಂದರೆ ನಿಮ್ಮಪ್ಪ ಎಂದು ಹೇಳತಕ್ಕಂತಹ ಜನರು ನಮ್ಮಲ್ಲಿದ್ದಾರೆ. ಜೊತೆಗೆ ಇಂದಿಗೂ ಸಹ ಅಧಿಕಾರಿಗಳ ಮತ್ತು ಸಾಮಾನ್ಯ ಜನತೆಯ ನಡುವೆ ಒಂದು ರೀತಿಯ ಸಾಮರಸ್ಯವಿಲ್ಲವೆ, ಜನತೆ ನಾನಾ ರೀತಿಯ ತೊಂದರೆಗಳನ್ನು ಅನುಭವಿಸುತ್ತಿರತಕ್ಕಂಥ ಉದಾಹರಣೆಗಳು ಹಲವಾರು ಇವೆ. ಮಾನ್ಯ ಪುಟ್ಟಸ್ವಾಮಿಯವರು ಸಹ ಅಸಿಸ್ಟೆಂಟ್ ಕಮಿಷನರ್ ಒಬ್ಬರಿಗೆ ಕನ್ನಡದ ಗಂಧವೇ ತಿಳಿದಿಲ್ಲವೆಂದು ಹೇಳುತ್ತಿದ್ದರು ; ಇದು ಸರಿಯಲ್ಲ ; ಎಲ್ಲ ಅಧಿಕಾರಿಗಳೂ ಕನ್ನಡವನ್ನು ಕಲಿಯುವಂತೆ ಏರ್ಪಾಡು ಮಾಡಬೇಕು ; ಇಲ್ಲವೇ ಎಲ್ಲರೂ ಇಂಗ್ಲೀಷ್ ಭಾಷೆಯನ್ನೇ ಕಲಿಯಬೇಕು ಎಂದು ಹೇಳಿಬಿಡಿ ; ಆದರೆ ಅದು ಆಗದ ಮಾತು ; ನಮ್ಮ ತಾಯಿನುಡಿ ಕನ್ನಡ ಆಗಿರುವುದರಿಂದ ಕನ್ನಡವನ್ನೇ ನಮ್ಮ ಆಡಳಿತ ಭಾಷೆಯನ್ನಾಗಿ ಉಪಯೋಗಿಸಬೇಕಾಗುತ್ತದೆ ಮತ್ತು ಅಧಿಕಾರಿಗಳು ಕನ್ನಡದಲ್ಲಿಯೇ ವ್ಯವಹಾರ ಮಾಡತಕ್ಕಂಥ, ಕನ್ನಡದಲ್ಲಿಯೇ ಬರೆಯತಕ್ಕಂಥ ರಿವಾಜನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇದು ಜಾರಿಗೆ ಬರದಿದ್ದರೆ ಜನತೆ ಮತ್ತು ಅಧಿಕಾರಿಗಳ ನಡುವೆ ಒಂದು ಸಮತೋಲನ ಏರ್ಪಡುವುದಿಲ್ಲವೆಂದು ಹೇಳುತ್ತೇನೆ. ಈ ಒಂದು ಸಮತೋಲನ ಏರ್ಪಡದಿದ್ದರೆ ಏನಾಗುತ್ತದೆಂದರೆ, ಎತ್ತು ಏರಿಗೆಳೆಯಿತು, ಕೋಣ ನೀರಿಗೆಳೆಯಿತು ಎಂಬಂತೆ ಆಗುತ್ತದೆ. ಇದು ಹೋಗಬೇಕು, ಅಧಿಕಾರಿಗಳು ಮತ್ತು ಜನತೆಯ ನಡುವೆ ಒಂದು ರೀತಿಯ ಹೊಂದಾಣಿಕೆ ಇರಬೇಕೇ ಹೊರತು, ಅವರು ಒಂದು ಕಡೆ ಚಿಂತನೆ ಮಾಡುವುದು, ಇವರು ಇನ್ನೊಂದು ಕಡೆ ಚಿಂತನೆ ಮಾಡುವುದು ಸರಿಯಲ್ಲ, ಇವರಿಬ್ಬರ ನಡುವೆ ಒಂದು ಹೊಂದಾಣಿಕೆಯಾಗಬೇಕಾಗಿದ್ದರೆ ನಾವು ಕನ್ನಡವನ್ನು ಬೆಳೆಸಬೇಕಾಗಿದೆ. ಅಂದರೆ ಎಲ್ಲ ಹಂತಗಳಲ್ಲಿಯೂ ಕನ್ನಡವನ್ನು ಬೆಳೆಸಬೇಕಾಗಿದೆ. ಕೇವಲ ಶಾಲಾಕಾಲೇಜುಗಳ ಮಟ್ಟದಲ್ಲಿ ಮಾತ್ರವಲ್ಲ, ಪ್ರತಿಯೊಂದರಲ್ಲಿಯೂ ಕನ್ನಡವನ್ನು ಬೆಳೆಸಬೇಕಾಗಿದೆ.

ಇನ್ನೊಂದು ಮುಖ್ಯವಾದ ಅಂಶವೆಂದರೆ, ಇಂಗ್ಲೀಷ್ ಭಾಷೆಯಲ್ಲಿರತಕ್ಕಂಥ ಶಬ್ದಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡುವಾಗ ಸಾಮಾನ್ಯ ಜನತೆಗೂ ಅರ್ಥವಾಗುವಂತಹ ಶಬ್ದಗಳನ್ನು ಬಳಸದೆ ಇಲ್ಲಸಲ್ಲದ ದೊಡ್ಡದೊಡ್ಡ ಶಬ್ದಗಳನ್ನು ಎರವಲು ತಂದು ಬಳಕೆ ಮಾಡಿದರೆ ಅಂತಹ ಶಬ್ದಗಳನ್ನು ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಈಗ ಉದಾಹರಣೆಗೆ ಅಸಿಸ್ಟೆಂಟ್ ಕಮಿಷನರ್ ಅಸಿಸ್ಟೆಂಟ್ ಇಂಜಿನಿಯರ್ ಎಂಬ ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡದೆ ಅದೇ ಪದಗಳನ್ನು ಕನ್ನಡದಲ್ಲಿ ಬಳಸಿದರೆ ಎಲ್ಲ ಜನತೆಗೂ ಅರ್ಥವಾಗುತ್ತದೆ. ಈಗ ಭೂಸುಧಾರಣಾ ಶಾಸನವನ್ನು ಕನ್ನಡಕ್ಕೆ ಭಾಷಾಂತರ ಮಾಡಲಾಗಿದೆ. ನಾನು ಕಳೆದ 16 ವರ್ಷಗಳಿಂದ ಲಾಯರ್ ಆಗಿ ಕೆಲಸ ಮಾಡಿದ್ದರೂ ಸಹ ಈ ಕನ್ನಡದ ಪ್ರತಿಯನ್ನು ಓದಿದರೆ ನನಗೆ ಅರ್ಥವೇ ಆಗುವುದಿಲ್ಲ, ಇದಕ್ಕೆ ಕಾರಣವೇನೆಂದರೆ, ಕನ್ನಡ ಭಾಷೆಗೆ ತರ್ಜುಮೆ ಮಾಡುವಾಗ ಅದರಲ್ಲಿ ಸಂಪೂರ್ಣವಾಗಿ ಸಂಸ್ಕೃತ ಭಾಷೆಯೇ ಅವರಿಸಿಬಿಟ್ಟಿದೆ. ಈ ಪದಗಳನ್ನು ಸಾಮಾನ್ಯ ಜನತೆ ಬಳಕೆ ಮಾಡುವುದಿಲ್ಲವಾದ ಕಾರಣ, ಅಂತಹ ಶಬ್ದಗಳನ್ನು ಓದಬೇಕೆಂದರೆ ಬಹಳ ಕಠಿಣವಾಗುತ್ತದೆ. ಆದಕಾರಣ ಇನ್ನು ಮುಂದೆ ಜನಸಾಮಾನ್ಯರೂ ಸಹ ಸುಲಭ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವಂತಹ ಮತ್ತು ದಿನ ಬಳಕೆಯಲ್ಲಿರತಕ್ಕಂಥ ಪದಗಳನ್ನು ಇಂಗ್ಲೀಷ್ ಭಾಷೆಯನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡುವಾಗ ಬಳಕೆ ಮಾಡಬೇಕೆಂದು ಹೇಳಿ ಅಂತ್ಯದಲ್ಲಿ ಕವಿಗಳೊಬ್ಬರು ಕನ್ನಡದ ಬಗ್ಗೆ ಹೇಳಿರುವುದನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ:—

" ನೀನು ಎಲ್ಲಾದರೂ ಇರು, ಹೇಗಾದರೂ ಇರು,
ನೀನು ಕನ್ನಡವಾಗಿರು, ಕನ್ನಡವೇ ನನ್ನ ಮನ,
ಕನ್ನಡವೇ ನನ್ನ ತನು, ಕನ್ನಡವೇ ನನ್ನ ಜೀವರಸ "

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಮಣ್ಣನವರು ಮಂಡಿಸಿರತಕ್ಕಂಥ ನಿರ್ಣಯವನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು, ಕನ್ನಡವನ್ನೇ ಆಡಳಿತ ಭಾಷೆಯನ್ನಾಗಿ ಬಳಸಬೇಕೆಂಬುದೇ ಈ ನಿರ್ಣಯವಾಗಿದೆ. ಈ ರೀತಿ ಎಲ್ಲ ಹಂತಗಳಲ್ಲಿಯೂ ಕನ್ನಡವನ್ನು ಬಳಕೆ ಮಾಡಬೇಕೆಂದು ನಮ್ಮ ರಾಜ್ಯದ ಜನತೆ ಸರ್ಕಾರದ ಮುಂದೆ ಏನು ಒಂದು ಬೇಡಿಕೆಯನ್ನು ಇಟ್ಟಿದೆ, ಅದಕ್ಕೆ ಓಗೊಟ್ಟು ಇಲ್ಲಿಯವರೆಗೆ ಸರ್ಕಾರ ಏನೇನು ಕ್ರಮ ಕೈಗೊಂಡಿದೆ ಎಂಬುದರ ಬಗ್ಗೆ ವಿಮರ್ಶೆ ಮಾಡಬೇಕಾಗಿದೆ. ಒಂದೇ ಭಾಷೆಯಲ್ಲಿ ಆಡಳಿತ ನಡೆಸಬೇಕು, ಒಂದೇ ಭಾಷೆಯಲ್ಲಿ ವಿದ್ಯಾಭ್ಯಾಸ ನಡೆಸಬೇಕು ಎಂಬುದಕ್ಕೆ ಕಾರಣವೇನು ಎಂಬುದನ್ನು ನಾವು ಮೊದಲು ನೋಡಬೇಕಾಗಿದೆ. ಮಾನ್ಯ ಶಾಮಣ್ಣನವರು ಈಗಾಗಲೇ ಹೇಳಿದಂತೆ ಈ ಹಿಂದೆ ನಮ್ಮ ದೇಶವನ್ನು ಆಳಿದಂಥ ಇಂಗ್ಲೀಷ್ ಸಾಮ್ರಾಜ್ಯವಾದಿಗಳು ಈ ದೇಶದಲ್ಲಿ ತಮ್ಮ ಒಂದು ಆಡಳಿತದ ಅನುಕೂಲಕ್ಕಾಗಿ ಇಂಗ್ಲೀಷ್ ಭಾಷೆಯನ್ನು ನಮ್ಮ ಮೇಲೆ ಬಲವಂತವಾಗಿ ಹೇರಿದರು, ಬೇರೆ ನಮ್ಮ ಭಾಷಗಳು ಬೆಳೆಯುವುದಕ್ಕೆ ಅವರು ಅವಕಾಶ ಕೊಡಲಿಲ್ಲ, ಈ ಅಂಶ ಚರಿತ್ರೆಯಿಂದ ನಮಗೆ ತಿಳಿದುಬರುತ್ತದೆ. ಸಾಮ್ರಾಜ್ಯವಾದಿಗಳಿಗೆ ಯಾವಾಗಲೂ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವುದಿಲ್ಲ ಇದು ಎಲ್ಲರೂ ತಿಳಿದಂಥ ವಿಷಯ. ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಲಿಲ್ಲವಾದ್ದರಿಂದಲೇ ಅವರು ನಮ್ಮ ದೇಶದಲ್ಲಿ ಯಾವ ಭಾಷೆಯನ್ನೂ ಬೆಳೆಸುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ ಆದರೆ ನಮಗೆ ಸ್ವಾತಂತ್ರ್ಯ ಬಂದಮೇಲೆ ಎಲ್ಲ ರಾಜ್ಯಗಳಲ್ಲಿಯೂ ಆಯಾ ರಾಜ್ಯಗಳ ಭಾಷೆ ಬೆಳೆಯಬೇಕು ಆಯಾ ರಾಜ್ಯ ಭಾಷೆಗಳ ಮೂಲಕವೇ ಆಡಳಿತ ನಡೆಸಬೇಕು, ಮತ್ತು ವಿದ್ಯಾಭ್ಯಾಸವನ್ನು ಕೊಡಬೇಕೆಂದು ಜನತೆ ಒಂದು ರೀತಿಯ ಆಂದೋಳನವನ್ನು, ಒಂದು ರೀತಿಯ ಚಳುವಳಿಯನ್ನು ನಡೆಸಿಕೊಂಡು ಬಂದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಮೊದಲು ರಬೀಂದ್ರನಾಥ ಠಾಕೂರ್ ಅವರ ನೇತೃತ್ವದಲ್ಲಿ ಈ ಒಂದು ಚಳುವಳಿ ನಡೆಯಿತು, ಎಲ್ಲವೂ ಬಂಗಾಳಿ ಭಾಷೆಯಲ್ಲಿಯೇ ನಡೆಯಬೇಕೆಂದು ಅವರು ಮೇಲಿಂದ ಮೇಲೆ ಒತ್ತಾಯ ಮಾಡಿದರು, ಅದೇ ರೀತಿ ಬೇರೆ ರಾಜ್ಯಗಳಲ್ಲಿಯೂ ನಡೆಯಿತು ನಮ್ಮ ರಾಜ್ಯದಲ್ಲಿಯೂ ಅಂತಹ ಚಳುವಳಿ ನಡೆಯುತ್ತಿದೆ. ಈ ರೀತಿ ಚಳುವಳಿ ಮಾಡುತ್ತಿರುವ ತಿರಳಾದವರೂ ಇಷ್ಟೇ ಈಗ ನಾವು ನಮ್ಮದು ಪ್ರಜಾಪ್ರಭುತ್ವದ ದೇಶ ಎಂದು ಹೇಳುತ್ತಿದ್ದೇವೆ. ಪ್ರಜಾಪ್ರಭುತ್ವವೆಂದರೆ ಏನು? ಪ್ರಜಾಪ್ರಭುತ್ವದ ತಿರುಳಾದರೂ ಇಷ್ಟೆ, ಜನರಿಂದ ಜನರಿಗೆ, ಜನರಿಗೋಸ್ಕರವಾಗಿ ಪ್ರಜಾಪ್ರಭುತ್ವ ಇದೆ ಎಂದು ಹೇಳುತ್ತೇವೆ. ಅದೇ ಇಂಗ್ಲೀಷ್ ಭಾಷೆಯಲ್ಲಿ ಹೇಳುವುದಾದರೆ, ಆಫ್ ದಿ ಪೀಪಲ್, ಬೈ ದಿ ಪೀಪಲ್, ಫಾರ್ ದಿ ಪೀಪಲ್ ಎಂದು ಹೇಳುತ್ತೇವೆ. ಇಲ್ಲಿ ಜನರಿಗೋಸ್ಕರವಾಗಿ ಎಂದರೆ ಹೇಗೆ ಎಂಬ ಪ್ರಶ್ನೆ ಬರುತ್ತದೆ. ಆಯಾ ಭಾಷೆಯಲ್ಲಿ ಆಡಳಿತವನ್ನು ನಡೆಸದಿದ್ದರೆ ಜನರಿಂದ ಜನರಿಗೆ, ಜನರಿಗೋಸ್ಕರ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ ಆದ್ದರಿಂದ ಆಯಾ ಭಾಷೆಯಲ್ಲಿಯೇ ಆಡಳಿತವನ್ನು ನಡೆಸಿದರೆ ಜನಸಾಮಾನ್ಯರೂ ಸಹ ವಿಷಯ ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಮತ್ತು ಎಲ್ಲರೂ ಆಡಳಿತದಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ, ನಾವು ಈಗಾಗಲೇ ನಾಲ್ಕು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ 5ನೇ ಪಂಚವಾರ್ಷಿಕ ಯೋಜನೆಯಲ್ಲಿದ್ದೇವೆ ಇನ್ನೂ ಪೂರ್ತಿಯಾಗಿ ಮುಗಿದಿಲ್ಲ ಆದರೆ ಇಲ್ಲಿಯವರೆಗೆ ಮುಗಿಸಿದ 4 ಪಂಚವಾರ್ಷಿಕ ಯೋಜನೆಗಳಲ್ಲಿ ನಮ್ಮ ದೇಶದ ಎಲ್ಲ ಜನರೂ ಭಾಗವಹಿಸುವುದಕ್ಕೆ ಅವಕಾಶವಾಗಲಿಲ್ಲ ಇದನ್ನು ತಜ್ಞರೇ ಒಪ್ಪಿಕೊಂಡಿದ್ದಾರೆ ಯೋಜನೆ ಎಂದರೇನು? ಯೋಜನೆಯನ್ನು ಯಾವ ರೀತಿ ಕಾರ್ಯಗತ ಮಾಡಬೇಕು ಆ ಯೋಜನೆಯ ರೂಪರೇಷಗಳೇನು ? ಅದರ ಮುಖ್ಯವಾದಂಥ ತತ್ವಗಳೇನು ಎಂಬತಕ್ಕ ಅರಿವು, ಎಂಬತಕ್ಕಂಥ ಜ್ಞಾನ ಜನತೆಗೆ ಬರಬೇಕಾದರೆ ಅದು ಆಯಾ ಭಾಷೆಗಳಲ್ಲಿಯೇ ಇದ್ದರೆ ಮಾತ್ರ ಜನತೆ ಅದನ್ನು ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಅದರ ವಿವರಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೋ, ಫ್ರೆಂಚ್ ಭಾಷೆಯಲ್ಲಿಯೋ ರಷ್ಯನ್ ಭಾಷೆಯಲ್ಲಿಯೋ ಇದ್ದರೆ ಜನತೆಗೆ ಅರ್ಥವಾಗುವುದಿಲ್ಲ ಸರ್ಕಾರ ತಾನು ಕೈ ಕೊಳ್ಳತಕ್ಕಂಥ ಕೆಲಸಕಾರ್ಯಗಳ ವಿಚಾರದಲ್ಲಿ ಜನತೆಯನ್ನೂ ಸಹ ತನ್ನ ಜೊತೆಯಲ್ಲಿ ಎಲ್ಲಿಯವರೆಗೆ ಕರೆದುಕೊಂಡು ಹೋಗುವುದಿಲ್ಲವೋ ಅಲ್ಲಿಯವರೆಗೆ ಖಂಡಿತವಾಗಿಯೂ ಈ ಪ್ರಜಾಪ್ರಭುತ್ವ ಬೆಳೆಯುವುದಿಲ್ಲವೆಂದು ಹೇಳುತ್ತೇನೆ. ಈಗ 20ಅಂಶದ ಕಾರ್ಯಕ್ರಮ ನಮ್ಮ ಮುಂದಿದೆ. ಈ ಬಗ್ಗೆ ಎಲ್ಲ ಜನತೆಗೂ ತಿಳುವಳಿಕೆ ಕೊಟ್ಟು, ಇದರಲ್ಲಿ ಅವರೂ ಕೂಡ ಭಾಗವಹಿಸುವಂತೆ ಮಾಡಿದರೆ ಮಾತ್ರ ಇದು ಯಶಸ್ವಿಯಾಗಿ ಕಾರ್ಯಗತವಾಗುತ್ತ

ದೆಂದು ಹೇಳುತ್ತೇನೆ. ಮತ್ತು ಇದರಿಂದ ದೇಶಕ್ಕೂ ಒಳ್ಳೆಯದಾಗುತ್ತದೆ, ರಾಜ್ಯಕ್ಕೂ ಒಳ್ಳೆಯದಾಗುತ್ತದೆ ಮತ್ತು ಜನತೆಗೂ ಸಹ ಒಳ್ಳೆಯದಾಗುತ್ತದೆ. ಈ ದೃಷ್ಟಿಯಿಂದ 20 ಅಂಶದ ಕಾರ್ಯಕ್ರಮದ ಬಗ್ಗೆ ಆಯಾ ಭಾಷೆಯ ಮೂಲಕವೇ ಜನತೆಗೆ ತಿಳುವಳಿಕೆ ಕೊಡುವುದರ ಮೂಲಕ ಅನುಷ್ಠಾನದಲ್ಲಿ ತರಬೇಕೆಂದು ಹೇಳುತ್ತೇನೆ. ಇಲ್ಲಿ ಭಾಷೆಯೇ ಪ್ರಜಾಪ್ರಭುತ್ವದ ತಿರುಳು ಆದಕಾರಣ ಆಯಾ ರಾಜ್ಯಭಾಷೆಯಲ್ಲಿಯೇ ಮಾತನಾಡುವುದಕ್ಕೆ ಎಲ್ಲರಿಗೂ ಹಕ್ಕಿರಬೇಕು, ಆಡಳಿತ ನಡೆಸುವುದಕ್ಕೆ ಹಕ್ಕಿರಬೇಕು ಮತ್ತು ಎಲ್ಲ ಹಂತಗಳಲ್ಲಿಯೂ ಅದೇ ಭಾಷೆಯನ್ನು ಉಪಯೋಗ ಮಾಡಬೇಕು ಇಲ್ಲದಿದ್ದರೆ ಪ್ರಜಾಪ್ರಭುತ್ವ ಬೆಳೆಯಲಾರದು. ಸಮತಾವಾದ ಮತ್ತು ಸಮಾಜವಾದದ ಬಗ್ಗೆ ಲೆನಿನ್ ಹೇಳಿರುವುದೇನೆಂದರೆ, ಸೋಸಿಯಲಿಜಂ ಈಸ್ ದಿ ಹೈಯೆಸ್ಟ್ ಫಾರಮ್ ಆಫ್ ಡೆಮಾಕ್ರಸಿ ಎಂದು ಅಂದರೆ ಪ್ರಜಾಪ್ರಭುತ್ವದ ಉಚ್ಚ ಮಟ್ಟದ ವ್ಯವಸ್ಥೆಯಲ್ಲಿಯೂ ಸಹ ಆಯಾ ಭಾಷೆಗೆ ಮೊದಲನೇ ಆದ್ಯತೆ ಕೊಡಬೇಕೆಂದು ಲೆನಿನ್ ಹೇಳಿರುವುದು. ನಾನೂ ಸಹ ರಷ್ಯಾ ದೇಶಕ್ಕೆ ಹೋಗಿ ಬಂದಿದ್ದೇನೆ. ಅಲ್ಲಿಯೂ 16 ಪ್ರಮುಖವಾದಂಥ ಭಾಷೆಗಳಿವೆ ಮತ್ತು ನೂರೆಂಟು ಲಿಪಿಗಳಿವೆ. ಆ ರೀತಿ ಇದ್ದರೂ ಸಹ ಆ ದೇಶ ಅಷ್ಟೊಂದು ಮುಂದುವರಿದಿರುವುದಕ್ಕೆ ಕಾರಣವೇನೆಂದರೆ, ಅಲ್ಲಿ ಆಯಾ ಭಾಷೆಯಲ್ಲಿಯೇ ಆಡಳಿತ ನಡೆಸುವುದಕ್ಕೆ ಶಿಕ್ಷಣ ಮಾಧ್ಯಮ ಕೊಡುವುದಕ್ಕೆ ಮತ್ತು ಇತರೇ ವ್ಯವಹಾರಗಳನ್ನು ನಡೆಸುವುದಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟಿರುವುದು ಆದರೆ ನಮ್ಮ ದೇಶದಲ್ಲಿ ಈ ದಿಶೆಯಲ್ಲಿ ಎಷ್ಟು ದೂರ ನಡೆಯಬೇಕಾಗಿತ್ತೋ ಅಷ್ಟು ದೂರ ನಡೆದಿಲ್ಲವೆಂದು ಹೇಳಬೇಕಾಗಿದೆ. ಆದರೆ ನಮ್ಮ ರಾಜ್ಯದಲ್ಲಿ ಈ ದಿಶೆಯಲ್ಲಿ ನಮ್ಮ ಸರ್ಕಾರದವರು ಏನನ್ನೂ ಮಾಡಿಲ್ಲ, ಕನ್ನಡದ ಬಗ್ಗೆ ಅಭಿಮಾನವಿಲ್ಲ, ಬೇರೆ ಭಾಷೆಗಳ ಬಗ್ಗೆ ಅಭಿಮಾನ, ವ್ಯಾಮೋಹವಿದೆ ಎಂಬುದಾಗಿ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಕನ್ನಡ ಭಾಷೆಯ ಅಭಿವೃದ್ಧಿ ಬಗ್ಗೆ ಎಷ್ಟು ದೂರ ಹೋಗಬೇಕಾಗಿತ್ತೋ ಅಷ್ಟು ದೂರ ಹೋಗಿಲ್ಲವೆಂದು ಹೇಳಬೇಕಾಗುತ್ತದೆ. ಇದಕ್ಕೆ ಉದಾಹರಣೆ ಕೊಡಬೇಕೆಂದರೆ, ನಾನು ಕಾರ್ಮಿಕರ ಮಧ್ಯ ಇದ್ದುಕೊಂಡು ಕೆಲಸ ಮಾಡುತ್ತಿರುವುದರಿಂದ, ಲೇಬರ್ ಕೋರ್ಟಿನ ಮುಂದೆ, ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಮುಂದೆ ಹೋಗಬೇಕಾಗಿ ಬರುತ್ತದೆ. ಆಗ ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ, ಇಂಗ್ಲೀಷ್‌ನಲ್ಲಿಯೇ ಮಾತನಾಡಿ, ಇಲ್ಲವೇ ತಮ್ಮ ಪರವಾಗಿ ಮಾತನಾಡಲು ಲಾಯರನ್ನು ಕರೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳುವಾಗ, ಅಲ್ಲಿ ಕನ್ನಡದಲ್ಲಿಯೇ ವಾದ ವಿವಾದ ನಡೆದರೆ, ಅಲ್ಲಿ ಏನು ನಡೆಯುತ್ತಿದೆ ಎಂಬುದು ಕಾರ್ಮಿಕರಿಗೂ ಅರ್ಥವಾಗುತ್ತದೆ. ಮತ್ತು ಅವರು ಕೊಟ್ಟ ತೀರ್ಪು ಸರಿಯೇ ಅಥವಾ ಅಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಜೊತೆಗೆ ಕಾರ್ಮಿಕರಿಗೂ ಸಹ ತಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಸಿಕ್ಕಿದೆ ಎಂಬತಕ್ಕಂಥ ನಂಬಿಕೆ ಬರುವುದಕ್ಕೆ ಅವಕಾಶವಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಈ ದಿನ ಏನಾಗಿದೆ ಎಂದರೆ ಯಾವ ಬಡ ಕಾರ್ಮಿಕ ಅಥವಾ ಯಾವ ಮನುಷ್ಯನಿಗೆ ಇಂಗ್ಲೀಷ್ ಬರುವುದಿಲ್ಲ ಅವನು ಕೋರ್ಟುಗಳಲ್ಲಿ ಏನು ವಿಚಾರ ನಡೆಯುತ್ತಿದೆ ಅದರಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿರುವುದಿಲ್ಲ. ನಮ್ಮ ಲಾಯರುಗಳು ದೊಡ್ಡದೊಡ್ಡ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ ಮಾನ್ಯ ತಿಮ್ಮಪ್ಪನವರು ಲಾಯರ್ ಅವರು ಇಲ್ಲಿ ಇದ್ದಾರೆ ಆದರೆ ಲಾಯರುಗಳು ಏನೋ ಓದುತ್ತಾರೆ ಅದನ್ನು ಯಾರು ಸಾಮಾನ್ಯಜನರು ತಿಳಿಯುವುದಕ್ಕೆ ಸಾಧ್ಯವಿಲ್ಲ. ವಿಷಯಗಳು ಕೂಡ ಅವನಿಗೆ ಅರ್ಥವಾಗುವುದಿಲ್ಲ. ಇಂತಹ ಪರಿಸ್ಥಿತಿ ಇರುವುದರಿಂದ ಕನ್ನಡದಲ್ಲಿಯೇ ಎಲ್ಲಾ ವ್ಯವಹಾರಗಳು ನಡೆದರೆ ಎಲ್ಲರಿಗೂ ಅದು ಅರ್ಥವಾಗುತ್ತದೆ. ಲೇಬರ್ ಕೋರ್ಟಿಗೆ ಹೋಗಿ ಯಾವ ಕೋರ್ಟಿಗೆ ಹೋಗಿ ಅಲ್ಲಿಯೂ ಸಹ ಕನ್ನಡ ಕಡ್ಡಾಯವಾಗಿ ಜಾರಿಗೆ ಬರಬೇಕೆಂದು ಸರ್ಕಾರ ಪ್ರಯತ್ನಪಡಬೇಕು. ಇನ್ನೂ ಅನೇಕ ನ್ಯಾಯಾಧೀಶರಿಗೆ ಇಂಗ್ಲೀಷ್ ವ್ಯಾಮೋಹ ಹೋಗಿಲ್ಲ. ನಾವು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದೇವೆ. ರಾಜ್ಯಭಾಷೆ, ರಾಷ್ಟ್ರಭಾಷೆ ಹಾಗೂ ಅಂತರರಾಷ್ಟ್ರೀಯ ಭಾಷೆ. ಅದರಲ್ಲಿ ರಾಜ್ಯಭಾಷೆ ಕನ್ನಡ ರಾಷ್ಟ್ರಭಾಷೆ ಹಿಂದಿ ಅಂತರ ರಾಷ್ಟ್ರಭಾಷೆ ಇಂಗ್ಲೀಷ್. ಆದರೆ ಅಂತರ ರಾಷ್ಟ್ರೀಯ ಭಾಷೆ ಸಂಪರ್ಕವಾಗಿ ಹೆಚ್ಚು ಇರುವುದರಿಂದ ನಾವು ಅದನ್ನೇ ಜಾಸ್ತಿ ಬಳಸುತ್ತಿದ್ದೇವೆ. ನಾವು ಫ್ರಾನ್ಸ್‌ಗೆ ಹೋದರೆ ಅಲ್ಲಿ ಫ್ರೆಂಚ್‌ನಲ್ಲಿ ಮಾತನಾಡುತ್ತಾರೆ ನಾವು ಜರ್ಮನಿಗೆ ಹೋದರೆ ಜರ್ಮನ್ ಭಾಷೆಯನ್ನು ಕಲಿಯಬಹುದು. ಆದರೆ ಆಡಳಿತದಲ್ಲಿ ಸರಿಯಾಗಿ ವ್ಯವಸ್ಥಿತವಾಗಿ ಆಡಳಿತ ನಡೆಯಬೇಕಾದರೆ

ಅದು ಕನ್ನಡದಲ್ಲಿಯೇ ಆಗಬೇಕು ಎಂದು ಹೇಳಬೇಕಾಗುತ್ತದೆ. ನಮ್ಮ ಅಧಿಕಾರಿಗಳು ನೋಟಿಫಿಕೇಷನ್ ಕನ್ನಡದಲ್ಲಿ ಹೊರಡಿಸಬೇಕಾಗುತ್ತವೆ. ಅದರ ತೀರ್ಪುಗಳು ಕೂಡ ಕನ್ನಡದಲ್ಲಿಯೇ ಇರಬೇಕು. ಇದಕ್ಕೆ ಒಂದು ಡೈರೆಕ್ಟರೇಟ್ ಮಾಡಿದ್ದೀರಿ? ಅದು ಎಷ್ಟು ದೂರ ಕೆಲಸಮಾಡಿದೆ ನನಗೆ ಗೊತ್ತಿಲ್ಲ. ಇನ್ನು ಎರಡನೆಯದು ಒತ್ತಿ ಹೇಳಬೇಕಾದ ಸಂದರ್ಭ ಮತ್ತು ಒಂದು ತೊಂದರೆ ಬಾದಿರುವುದು ಏನು ಎಂದರೆ ಕನ್ನಡ ಟೈಪ್‌ರೇಟರ್, ಇದು ಬಹಳ ಮುಖ್ಯವಾದದು. ಇದಕ್ಕೆ ತಾವು ದಯಮಾಡಿ ಹೆಚ್ಚಿನ ಆಸ್ಥೆ ಕೊಟ್ಟು ಎಷ್ಟೇ ದುಡ್ಡು ಖರ್ಚಾದರೂ ಮಾಡಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಅದನ್ನು ಮಾಡಿದರೆ ಆಡಳಿತ ಸುಗಮವಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಪ್ರತಿಯೊಂದನ್ನು ಕನ್ನಡ ಭಾಷೆಯಲ್ಲೇ ನಡೆಯುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಮೂರನೆಯದು ಕನ್ನಡ ಭಾಷೆ ವಿದ್ಯಾಭ್ಯಾಸದಲ್ಲಿ ಮಾಧ್ಯಮವಾಗಬೇಕು ಎಲ್ಲರಿಗೂ ಕನ್ನಡದಲ್ಲಿ ಕಳಕಳಿ ಇಲ್ಲದೆ ಹೋದರೆ ಇದು ಸಾಧ್ಯವಾಗುವುದಿಲ್ಲ. ನಮ್ಮ ಜನರು ಪರಭಾಷೆ ವ್ಯಾಮೋಹ ಇಟ್ಟುಕೊಂಡರೆ ಇಟ್ಟುಕೊಳ್ಳಲಿ ಆದರೆ ನಮ್ಮ ಭಾಷೆಗೆ ನಾವು ಎಷ್ಟು ಪ್ರಾಧಾನ್ಯತೆ ಕೊಡಬೇಕೋ ಅಷ್ಟನ್ನು ಕೊಟ್ಟು ಮತ್ತೆ ಬೇರೆ ಭಾಷೆಗೆ ಅಭಿಮಾನ ತೋರಬೇಕು ಅಷ್ಟೇ? ನಮಗೆ ಸರಿಯಾಗಿ ಬೇರೆ ಭಾಷೆ ಬರದೆ ಇದ್ದರೂ ಕೂಡ ಅದರಲ್ಲೇ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಶೀರನಹಳ್ಳಿ ಚಂದ್ರಶೇಖರ್ ರವು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾನು ಕೊಟ್ಟಂತ ಈ ಎರಡು ಮೂರು ಸಲಹೆಗಳನ್ನು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ತಾವು ವರ್ಷಕ್ಕೊಂದು ಸಾರಿ ಕನ್ನಡದ ಅಭಿವೃದ್ಧಿ ಬಗ್ಗೆ ರಿಪೋರ್ಟು ಕೊಟ್ಟರೆ ಒಳ್ಳೆಯದು. ನಿಮ್ಮ ಡೈರೆಕ್ಟರೇಟ್ ಇನ್ನು ಹೆಚ್ಚು ರೀತಿಯಲ್ಲಿ ಕೆಲಸಮಾಡುವಂತೆ ಮಾಡಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಲೆವೆಲ್‌ನಲ್ಲಿ ಕೆಲಸಮಾಡುವಂತೆ ಮಾಡಬೇಕೆಂದು ಹೇಳಿ ಈ ನಿರ್ಣಯಕ್ಕೆ ಪೂರ್ಣ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ ಆರ್. ಶ್ರೀನಿವಾಸುಲು ನಾಯಿಡು — ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಬಹಳ ಒಳ್ಳೆಯ ಒಂದು ಠರಾವನ್ನು ಈ ಸದನದ ಮುಂದೆ ತಂದಿದ್ದಾರೆಂದು ಹೇಳುತ್ತೇನೆ. ಕನ್ನಡದ ಬಗ್ಗೆ ವಿಶೇಷವಾಗಿ ಪ್ರತಿಯೊಬ್ಬ ಕನ್ನಡಿಗನಿಗೂ ಪ್ರೀತಿ, ವಿಶ್ವಾಸ ಮತ್ತು ಗೌರವ ಇರಬೇಕಾದ್ದು ಸಹಜ ಅಭಿಮಾನ ಪ್ರತಿ ಮಾನವನಿಗೂ ಇರುತ್ತದೆ ಮೂರು ಅಭಿಮಾನಗಳು ಮಾನವನಿಗೆ ಇರುತ್ತದೆ ಅದು ಯಾವುದು ಎಂದರೆ; ಭಾಷಾಭಿಮಾನ, ಕಲಾಭಿಮಾನ ಮತ್ತು ದೇಶಾಭಿಮಾನ ಎಂಬುದಾಗಿ ಕನ್ನಡವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಅಂದರೆ ಹಳೆ ಕನ್ನಡ, ಹೊಸ ಕನ್ನಡ ಮತ್ತು ನಡುಕನ್ನಡವೆಂದು. ಇದು ತಮಗೂ ಗೊತ್ತಿದ್ದ ವಿಷಯವೇ ಆಗಿದೆ. ಡೆಮಾಕ್ರಸಿಯೂ ಸಹ ಮೂರು ಕಂಬಗಳ ಮೇಲೆ ನಿಂತಿರುತ್ತದೆ ಅವು ಯಾವುವೆಂದರೆ Executive Judicial and Legislature ಮತ್ತು ಎಲ್ಲಾ ಲೆವೆಲ ನಲ್ಲಿ ಮೀಡಿಯಮ್ ಆಫ್ ಎಕ್ಸ್‌ಪ್ರಷನ್ ಕನ್ನಡದಲ್ಲೇ ಇರಬೇಕು ಇದು ಮೂನ್ನೂರುಕೋಟಿ ಕನ್ನಡಿಗರಿಗೂ ಅರ್ಥವಾಗಬೇಕು ಸ್ಕೂಲಿನಲ್ಲಿ ಹಿಂದೆ ಮಾಡಿಸುತ್ತಿದ್ದರು ದಿವಂಗತ ಬಿ ವಾಸುದೇವಯ್ಯನವರ ಬಾಲಬೋಧೆಯಲ್ಲಿ ಆಟ, ಊಟ ಮತ್ತು ಓಟ ಎಂದು ಯಾವರೀತಿ ಅಭ್ಯಾಸ ಮಾಡುತ್ತಿದ್ದರೂ ವಕೀಲರಾಡುವ ಭಾಷೆ, ಪೂರಾ ಇಂಟಲೆಕ್ಚುಯಲ್‌ಗೆ ಅರ್ಥವಾಗುವ ಭಾಷೆ ಆಗಬಾರದು ಸಾಮಾನ್ಯವಾಗಿ ಅರ್ಥವಾಗದ ಭಾಷೆ ಆಗಬೇಕು ಜನರು ಅಂದರೆ IAS ಆಫೀಸರ್ಸ್ ಏನು ಇದ್ದಾರೆ ಅವರು ಸೆಂಟ್ರಲ್ ಗೌರ್ನಮೆಂಟ್ ಕೋಟಾದಿಂದ ಬಂದಿರುತ್ತಾರೆ ಅವರಿಗೂ ಸಹಿತ ನಮ್ಮ ಕನ್ನಡ ಓದುಬರೆಯಲು ಬರಬೇಕು. ಅವರು ಕೂಡ ಕನ್ನಡ ಅಭ್ಯಾಸ ಮಾಡಿ ಈ ಭಾಷೆಗೆ ಪ್ರಾಮುಖ್ಯತೆ ಕೊಡಬಹುದು. ಅದು ನಮ್ಮ ಆದ್ಯಕರ್ತವ್ಯ. ಉದಾಹರಣೆಗೆ ನೀವು ತಮಿಳುನಾಡಿಗೆ ಹೋಗಿ ಅಥವಾ ಮಹಾರಾಷ್ಟ್ರಕ್ಕೆ ಹೋಗಿ ನೋಡಿ ಅಲ್ಲಿನ ನಾಮಫಲಕಗಳನ್ನು ನೋಡಿದರೆ. ಅವರು ತಮ್ಮದೇ ಆದ ತಾಯಿ ಭಾಷೆಯಲ್ಲಿ ಬರೆದಿರುತ್ತಾರೆ ನಮ್ಮ ಕನ್ನಡಿಗರಿಗೆ ಏಕೆ ಭಾಷಾಭಿಮಾನ ಬರಲಿಲ್ಲ? ಏತಕ್ಕೆ ಬರಬಾರದು? ಏತಕ್ಕೆ ಬರಲಿಲ್ಲವೆಂದು ಕೇಳುತ್ತೇನೆ. ನಮ್ಮ ಅನಂತ ಸುಬ್ಬರಾಯರು ಒಂದು ಕನ್ನಡ ಟೈಪ್‌ರೈಟರನ್ನು ಕಂಡು ಹಿಡಿದಿದ್ದಾರೆ ನಾವು ಟೈಪ್ ಮಾಡುವಾಗ ಸ್ವಲ್ಪ ಸ್ಪೀಡ್ ಕಮ್ಮಿ ಆಗುತ್ತದೆಂದು ಕೇಳಿದ್ದೇನೆ. ಮಾ ನಾ. ಮೂರ್ತಿಯವರು ಕೂಡ ಹೇಳಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಯವರು ದಯಮಾಡಿ ಒಂದು ಸ್ಕ್ರಿಪ್ಟ್ ರೀ ಫಾರ್ಮ್ಸ್ ಕಮಿಷನ್ ಮಾಡಬೇಕೆಂದು ಒತ್ತಿ ಹೇಳುತ್ತೇನೆ ನಮ್ಮ ಭಾಷೆಯಲ್ಲಿ ಮತ್ತು ಬರವಣಿಗೆಯಲ್ಲಿ ಇರತಕ್ಕಂತ Script Reforms Commition ನ್ನ ಲೋಪದೋಷಗಳನ್ನು ತಿದ್ದಲು ಒಂದು ಕಮಿಟಿ ಮಾಡಿತ್ತು ಅದು ಈಗ ಕೆಲಸ ಮಾಡುತ್ತಾ ಇದೆಯೋ ಇಲ್ಲವೋ ಗೊತ್ತಿಲ್ಲ. ಈಗಲಾದರೂ ಸ್ಕ್ರಿಪ್ಟ್ ರೀ ಫಾರ್ಮ್ಸ್ ಕಮಿಷನ್ ಮಾಡಿ ಎಂದು ಮತ್ತೊಮ್ಮೆ ಒತ್ತಿ ಕೇಳುತ್ತೇನೆ. ಎಮೋಷನಲ್ ಇಂಟಿಗ್ರೇಷನ್ ಆಗುತ್ತದೆ. ಕನ್ನಡ ತೆಲುಗು

ಭಾಷೆಗಳು ಒಂದು ರೀತಿಯಲ್ಲಿ ಅಕ್ಕ ತಂಗಿಯರಿದ್ದಂತೆ. ಇದರಲ್ಲಿ ಕೇವಲ ೫-೬ ಅಕ್ಷರ ಮಾತ್ರ ವ್ಯತ್ಯಾಸ ಇರುತ್ತದೆಂದು ನಾನು ಕೇಳಿದ್ದೇನೆ. ಇದರಿಂದ ದಕ್ಷಿಣ ಭಾರತ ದೇಶದಲ್ಲಿ ಭಾಷೈಕ್ಯತೆ ಉಂಟಾಗಿದೆ Emotional Intigration ಆಗುತ್ತದೆ ಎಂಬುದು ನನ್ನ ಭಾವನೆ. ಈ ಸದನದಲ್ಲಿ ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಈ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಇನ್ನು ಕನ್ನಡಸಾಹಿತ್ಯ ಪರಿಷತ್ತು, ವಿಶಾಲ ಕರ್ನಾಟಕ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಗಳೂ ಹಾಗೂ ಇನ್ನು ರನ್ನ ಪಂಪ, ಬಿ. ಎಂ. ಶ್ರೀಕಂಠಯ್ಯನವರೆಂಬ ಹಳೆಗನ್ನಡ ಕವಿಗಳು ಮೀಸಿ; ಜಿ. ಪಿ. ರಾಜರತ್ನಂ ಮುಂತಾದ ಆಧುನಿಕ ಕವಿಗಳು ಇನ್ನು ಅನೇಕರು ನಮ್ಮ ಭಾಷೆಗೆ ಆದ್ಯ ಗಮನವನ್ನು ಕೊಡಬೇಕೆಂದು ಮತ್ತು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಮತ್ತು ದುಡಿದಿದ್ದಾರೆ. ಅವರೆಲ್ಲರೂ ಕನ್ನಡಕ್ಕೋಸ್ಕರ ಸಾಕಷ್ಟು ದುಡಿದಿದ್ದಾರೆ ಮತ್ತು ಮಡಿದಿದ್ದಾರೆಂದು ಹೇಳಿ ಆದರ ಜೊತೆಯಲ್ಲಿ ನಮ್ಮ ಸರ್ಕಾರ ಕನ್ನಡದ ಬಗ್ಗೆ ಏನೂ ಮಾಡಿಲ್ಲವೆಂದು ಹೇಳುವುದು ತಪ್ಪಾಗುತ್ತದೆ ಆದರೆ ಸಾಲದು ಎಂದು ಮಾತ್ರ ಹೇಳುತ್ತೇನೆ. ಇದಕ್ಕೆ ಇನ್ನು ಹೆಚ್ಚು ಹಣ ಒದಗಿಸಬೇಕು ಎಂದು ಹೇಳುತ್ತೇನೆ. ಎಲ್ಲರಿಗೂ ಈ ಲಿಪಿ ಅರ್ಥವಾಗಬೇಕು. ಮತ್ತು ಬರೆಯಲು ಬರಬೇಕು ಮಾನ್ಯ ಕೃಷ್ಣನ್‌ರವರು ಹೇಳಿದರು ನಾವು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದೇವೆಂದು. ಅದು ನಿಜ ಆದರೆ ಅದು ಅರ್ಥವಾಗುವಂತ ಭಾಷೆಯಾಗಬೇಕು. ಅದಕ್ಕೋಸ್ಕರ "ಕಚೇರಿ ಕೈಪಿಡಿ" ಎಂದು ಘನಸರ್ಕಾರದವರು ಮಾಡಿದ್ದಾರೆ ಅಡ್ಮಿನಿಸ್ಟ್ರೇಷನ್ ಡಿಫೆಕ್ಟ್ಸ್ ಏನು ಇದೆ ಅದನ್ನು ತೆಗೆದುಹಾಕಬೇಕು. ಈ ದೇಶವನ್ನು ಮಹಮದೀಯರು ೬೦೦ ವರ್ಷ ಆಳಿದ್ದರು ಪರಕೀಯರು (ಆಂಗ್ಲರು) ಸುಮಾರು ೨೦೦ ವರ್ಷಗಳು ಆಳಿದ್ದರು ಆದ್ದರಿಂದ ಎಷ್ಟೋ ನಮ್ಮ ಭಾಷೆಯ ಮೇಲೆ ಪ್ರಭಾವ ಬೀರಿರುತ್ತವೆ. ಈಗ ನಮ್ಮದೇ ಆದ ಶೈಲಿಯಲ್ಲಿ, ಭಾಷೆಯಲ್ಲಿ ಉತ್ತಮ ಗ್ರಂಥಗಳು ರಚಿಸಬೇಕು ಈಗ ನಮ್ಮ ಭಾಷೆಗೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು. ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇನ್ನೂ ನಮ್ಮ ಭಾಷೆ ಉತ್ತಮ ಸ್ಥಿತಿಗೆ ತರಲಿ ಎಂದು ಹೇಳುತ್ತೇನೆ "ಸಿರಿಗನ್ನಡಂಗೆಲ್ಗೆ" "ತಾಯಿನಾಡಿನ ಬಾಳ್ಗೆ" ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P. M.

† ಶ್ರೀ ವೆಂಕಟಲಿಂಗಯ್ಯ (ಕೃಷ್ಣರಾಜ).– ಮಾನ್ಯ ಅಧ್ಯಕ್ಷರೇ, ಶ್ರೀಯುತ ಶಾಮಣ್ಣನವರು ತಂದಿರ ತಕ್ಕ ನಿರ್ಣಯವನ್ನು ಸ್ವಾಗತಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ನಿರ್ಣಯದ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ ಸಾಮಾನ್ಯವಾಗಿ ಈ ಸಭೆಯಲ್ಲಿ ಎಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ ಏಕೆಂದರೆ ನಮ್ಮ ಜನರು ಆಡತಕ್ಕ ಭಾಷೆಯನ್ನು ಈಗ ಆಡಳಿತ ಭಾಷೆಯನ್ನಾಗಿ ಮಾಡಬೇಕೆನ್ನುವುದರಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯವಿಲ್ಲ. ಈಗ ನಾನು ಹೇಳಿದ ವಿಷಯವನ್ನು ಮಾನ್ಯ ಸಚಿವರು ಮತ್ತು ಎಲ್ಲ ಸದಸ್ಯರೂ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ ಕನ್ನಡ ಭಾಷೆ ಆಡಳಿತ ಭಾಷೆ ಮಾಡಬೇಕೆನ್ನುವುದು ಮುಖ್ಯ. ನಮ್ಮ ದೇಶಭಾಷೆ ಕನ್ನಡ. ಅಂದಮೇಲೆ ಎಲ್ಲವೂ ಕನ್ನಡದಲ್ಲಿ ಇರಬೇಕೆಂಬುದು ಒಟ್ಟಿನಲ್ಲಿ ಇದು ಯಾವಾಗ ಆಗುವುದೋ, ಇದಕ್ಕೇನಾದರೂ ಕಾಲಮಿತಿ ಇದೆಯೋ ಏನೋ ಗೊತ್ತಾಗುತ್ತಾ ಇಲ್ಲ. ಬೇರೆಬೇರೆ ಪ್ರಾಂತಗಳಲ್ಲಿ ನೋಡಿದರೆ ನಮ್ಮ ತಮಿಳುನಾಡು ಮತ್ತು ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಈಗಾಗಲೇ ಅಲ್ಲೆಲ್ಲಾ ಆಯಾ ದೇಶಭಾಷೆಯೇ ಆಡಳಿತ ಭಾಷೆಯಾಗಿದೆ. ಆದರೆ ಕರ್ನಾಟಕದಲ್ಲಿ ಇನ್ನೂ ಪೂರ್ಣವಾಗಿ ಕನ್ನಡ ರಾಜ್ಯಾಡಳಿತ ಭಾಷೆಯಾಗದೇ ಇರುವುದಕ್ಕೆ ಕಾರಣವೇನು ಎಂಬತಕ್ಕ ಪ್ರಶ್ನೆ ಉದ್ಭವವಾಗುತ್ತದೆ, ಆದರೆ ಮಾನ್ಯ ಮಂತ್ರಿಗಳು ಇದರಲ್ಲಿ ಕೆಲವು ಸಮಸ್ಯೆಗಳು ಇವೆಯೆಂದು ಹೇಳಬಹುದು. ಆದರಲ್ಲಿ ಬಹು ಮುಖ್ಯವಾಗಿ ಭಾಷಾಂತರ ಕನ್ನಡದಲ್ಲಿ ಮಾಡಬೇಕಾದರೆ ಬಹಳ ಕಷ್ಟವಿದೆಯೆಂದು ಹೇಳಬಹುದು. ಏಕೆಂದರೆ ಕಾನೂನು ಮತ್ತು ಇತರ ಗ್ರಂಥಗಳನ್ನು ಕನ್ನಡದಲ್ಲಿ ಪೂರ್ಣವಾಗಿ ಭಾಷಾಂತರ ಮಾಡಿಸುವುದಕ್ಕೆ ಬಹಳ ಕಷ್ಟವಾಗುತ್ತದೆ ಕನ್ನಡ ಟೈಪ್‌ರೈಟಿಂಗ್ ಮೆಷಿನ್‌ಗಳು ಬಹಳ ಕಡಿಮೆ ಇರುವುದರಿಂದ ಮತ್ತು ಇನ್ನೂ ಇತರ ಅನೇಕ ಕುಂದುಕೊರತೆಗಳು ಇವೆ ಎಂಬುದಾಗಿ ಅವರು ಹೇಳುತ್ತಾರೆ. ಆದರೂ ಸರ್ಕಾರದವರು ಅದನ್ನು ಆದಷ್ಟು ಜಾಗ್ರತೆಯಾಗಿ ಮಾಡಲೇಬೇಕು ಸರ್ಕಾರದವರು ಮನಸ್ಸುಮಾಡಿ ಆ ಕಾರ್ಯವನ್ನು ಇಷ್ಟೇ ದಿವಸಗಳೊಳಗ ಮುಗಿಸಬೇಕೆಂದು ನಿರ್ಧಾರಮಾಡಿ ಅದಕ್ಕೆ ಸಾಕಾದಷ್ಟು ಹಣವನ್ನು ಬಡೆಟ್ಟಿನಲ್ಲಿ ಒದಗಿಸಿದರೆ ಮತ್ತು ಅದಕ್ಕೆ ಏನೇನು ಮಾಡಬೇಕೋ ಆ ವ್ಯವಸ್ಥೆಗಳನ್ನೆಲ್ಲಾ ಮಾಡಿದರೆ, ಅದರ ಬಗ್ಗೆ ಕಟ್ಟುನಿಟ್ಟಾದ ಪಾಲಿಸಿಯನ್ನು ಹಾಕಿಕೊಂಡರೆ, ಆಗ ಇಷ್ಟೇ ದಿವಸಗಳಲ್ಲಿ ಈ ಕಾರ್ಯವನ್ನು ಮಾಡಿ ಮುಗಿಸಬಹುದೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ, ನಿಜವಾಗಿಯೂ ಸರ್ಕಾರದವರು ಮನಸ್ಸುಮಾಡಿದ್ದರೆ, ಈ ಒಂದು

ಕಾರ್ಯವನ್ನು ಮಾಡಿ ಮುಗಿಸುವುದಕ್ಕೆ ಇಷ್ಟು ತಡವಾಗುತ್ತಾ ಇರಲಿಲ್ಲ. ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗದಲ್ಲಿ ಮೊಟ್ಟ ಮೊದಲನೆಯದಾಗಿ ಕನ್ನಡ ಭಾಷೆಯನ್ನು ಜಾರಿಗೆ ತರುವಂತೆ ವ್ಯವಸ್ಥೆಮಾಡಿದರೆ ಅದಿಷ್ಟು ತಡವಾಗುತ್ತಾ ಇರಲಿಲ್ಲ ನಾನು ನೋಡಿದ ಹಾಗೆ ನಮ್ಮ ಪ್ರೊಸೀಡಿಂಗ್ಸ್‌ನಲ್ಲಿ ಹೆಚ್ಚು ಇಂಗ್ಲಿಷ್ ಭಾಷೆಯಲ್ಲಿಯೇ ಇಲ್ಲಿ ನಡೆಯುತ್ತಿವೆ. ನಮಗೆ ಕೊಡತಕ್ಕ ಕಾಲ್ ಅಟೆನ್‌ಷನ್ ನೋಟೀಸ್, ಇನ್ನೂ ಇತರ ತಿದ್ದುಪಡಿಗಳೆಲ್ಲಾ ಬರೀ ಇಂಗ್ಲಿಷ್‌ನಲ್ಲಿಯೇ ಬರುತ್ತಿವೆ ಕನ್ನಡದಲ್ಲಿ ಅವನ್ನೆಲ್ಲಾ ಪ್ರಿಂಟ್ ಮಾಡಿಸಿ ಕೊಡುವುದಕ್ಕೆ ಇವರಿಗೇನು ತೊಂದರೆಯೋ ಗೊತ್ತಿಲ್ಲ. ಸರ್ಕಾರದ ಕಚೇರಿಗಳಲ್ಲಿ ಮಾಡಬೇಕಾದುದನ್ನು ಮನಸ್ಸು ಮಾಡಿ ಮಾಡಿದರೆ ಈ ಕೆಲಸ ಇಷ್ಟು ನಿಧಾನವಾಗುತ್ತಿರಲಿಲ್ಲ. ಏನೋ ಟೋಕನ್ ರೀತಿ ವರ್ಷೇ ವರ್ಷೇ ಕನ್ನಡ ಭಾಷೆಗೋಸ್ಕರ ಎಷ್ಟು ಹಣವನ್ನು ಒದಗಿಸಿದ್ದಾರೋ ಅದನ್ನು ಸ್ವಲ್ಪಸ್ವಲ್ಪವಾಗಿ ನಾಮಿ ನಲ್ಲಾಗಿ ತೋರಿಸುತ್ತಿದ್ದೀರಿ. ಎಷ್ಟು ವರ್ಷಗಳಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯ, ಪೂರ್ತಿ ಎಷ್ಟು ಖರ್ಚಾಗುತ್ತದೆಂದು ಒಂದು ಪ್ಲಾನಿನ ಮೇಲೆ ಏನಾದರೂ ಮಾಡಲಾಗಿದೆಯೋ ಅಥವಾ ಎಷ್ಟು ವರ್ಷ ಗಳಲ್ಲಿ ಇದನ್ನು ಮುಗಿಸುತ್ತಾರೆಂಬ ಬಗ್ಗೆ ಯಾವ ಒಂದು ಏರ್ಪಾಡನ್ನೂ ಮಾಡಿಕೊಂಡಿಲ್ಲ, ಪಿ. ಎಸ್. ಸಿ. ಕಮಿಷನ್ನಿನಲ್ಲಿ ಸರ್ಕಾರೀ ಕಚೇರಿಯಲ್ಲಿ ಪರೀಕ್ಷೆಗಳು ಇಂಗ್ಲಿಷ್‌ನಲ್ಲಿ ನಡೆಯುತ್ತಿವೆ ಮೊಟ್ಟಮೊದಲು ಸ್ಕೂಲುಗಳಲ್ಲಿ ಮತ್ತು ಕಾಲೇಜುಗಳಲ್ಲಿ ಇದನ್ನು ಮೊದಲು ಮಾಡಬೇಕು. ಆಡಳಿತ ಭಾಷೆ ಇಂಗ್ಲಿಷ್ ನಲ್ಲಿಯೇ ಇರುವುದರಿಂದ ಕೆಲವರಿಗೆ ಇನ್ನೂ ಇಂಗ್ಲಿಷ್ ಬೇಕೆಂಬ ವ್ಯಾಮೋಹ ಇದೆ. ಆದ್ದರಿಂದ ಇದನ್ನು ಕೂಡಲೇ ತಪ್ಪಿಸಬೇಕು. ಆಟೊಮ್ಯಾಟಿಕ್ಕಾಗಿ ಕಾಲೇಜ್‌ಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡ ಬೇಕು. ಆಗ ಹುಡುಗರೆಲ್ಲರೂ ಅದನ್ನು ತೆಗೆದುಕೊಂಡು ಪಾಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಕರ್ನಾಟಕ ಸರ್ಕಾರದವರು ಬೇರೆ ಇತರ ರಾಜ್ಯಗಳನ್ನು ಹೋಲಿಸಿಕೊಂಡರೆ ಯಾವ ರೀತಿಯಲ್ಲಿ ಇತರೇ ರಾಜ್ಯಗಳವರು ಆಯಾ ದೇಶಭಾಷೆಗಳಿಗೆ ಗಮನವನ್ನು ಕೊಟ್ಟಿದ್ದಾರೋ ಅದೇ ರೀತಿಯಲ್ಲಿ ನಮ್ಮ ಕನ್ನಡ ಭಾಷೆಗೆ ನಿಜವಾಗಿಯೂ ಕೊಡಬೇಕೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಈಗಲಾದರೂ ಮಾನ್ಯ ಶ್ರೀ ಶಾಮಣ್ಣನವರು ತಂದಿರತಕ್ಕ ನಿರ್ಣಯವನ್ನು ಒಪ್ಪಿಕೊಂಡು ಇಷ್ಟೇ ದಿವಸಗಳಲ್ಲಿ ಅಂದರೆ ಐದು ವರ್ಷಗಳಲ್ಲಿಯೋ ಅಥವಾ ಹತ್ತು ವರ್ಷಗಳಲ್ಲಿಯೋ ಕನ್ನಡ ಭಾಷೆಯನ್ನು ರಾಜ್ಯಾಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು ಸರ್ಕಾರದವರು ಹೇಳಬೇಕು. ಶಾಲಾಕಾಲೇಜುಗಳಲ್ಲಿ, ನ್ಯಾಯಾಂಗದಲ್ಲಿ, ಕಾರ್ಯಾಂಗದಲ್ಲಿ ಮತ್ತು ಶಾಸಕಾಂಗದಲ್ಲಿ ಕನ್ನಡವನ್ನು ಜಾರಿಗೆ ತರುತ್ತೇವೆಂದು ಸರ್ಕಾರ ನಿರ್ಧಾರಮಾಡಿದರೆ ಬಹಳ ಒಳ್ಳೆಯದು. ಆಗ ಅದು ಬೇಗೆಯೇ ಆಗುತ್ತದೆ. ಅದಕ್ಕೆ ಇರತಕ್ಕ ತೊಂದರೆಗಳನ್ನು ಮತ್ತು ತೊಡಕುಗಳನ್ನು ನಿವಾರಣೆ ಮಾಡುವುದಕ್ಕೆ ಏನು ಮಾಡ ಬೇಕೋ ಅದರ ಬಗ್ಗೆ ಸರ್ಕಾರದವರು ಗಮನಕೊಟ್ಟು ಸಾಕಷ್ಟು ಹಣವನ್ನೊದಗಿಸಿ ಕನ್ನಡವನ್ನು ನಮ್ಮ ದೇಶಭಾಷೆಯನ್ನಾಗಿ ಅಥವಾ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಹಾಗು ಶಾಲಾ ಕಾಲೇಜುಗಳಲ್ಲಿ ಕನ್ನಡ ಭಾಷೆಯನ್ನು ಮಾಧ್ಯಮವಾಗಿ ತರುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕು. ಇನ್ನು ತ್ರಿಭಾಷೆ ಕಲಿಯಬೇಕೆಂದು ಈಗ ಹೇಳುತ್ತಿರುವಾಗ ಕನ್ನಡ ಭಾಷೆಯನ್ನು ನಮ್ಮ ದೇಶಭಾಷೆಯನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ಉಳಿದ ಹಿಂದಿ ಮತ್ತು ಇಂಗ್ಲಿಷ್ ಈ ಎರಡು ಭಾಷೆಗಳನ್ನು ಆಪ್ಷನಲ್ ಆಗಿ ಕಲಿಯಬೇಕೆಂದು ಈಗ ಮಾಡಿದ್ದಾರೆ. ಸರ್ಕಾರದವರು ಇದರ ಬಗ್ಗೆ ಕೊಡುತ್ತಿರುವ ಗಮನ ಏನೇನೂ ಸಾಲದು. ಇತರೇ ರಾಜ್ಯಗಳನ್ನು ಹೋಲಿಸಿಕೊಂಡರೆ ಅಲ್ಲಿ ಅದರ ಬಗ್ಗೆ ಸಾಕಾದಷ್ಟು ಗಮನ ಕೊಡುವುದಲ್ಲದೆ ಅದಕ್ಕೆ ಸಾಕಷ್ಟು ಹಣ ಕೊಟ್ಟು ಇಷ್ಟೇ ದಿವಸಗಳಲ್ಲಿ ಅದನ್ನು ಮಾಡುತ್ತೇವೆಂದು ಹೇಳುವ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕನ್ನಡವನ್ನು ರಾಜ್ಯಾಡಳಿತ ಭಾಷೆ ಯನ್ನಾಗಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಈ ನಿರ್ಣಯವನ್ನು ಈ ಸಭೆ ಒಪ್ಪಿ ಕೊಳ್ಳಬೇಕು. ಅದಕ್ಕಾಗಿ ಸರ್ಕಾರದವರು ಎಲ್ಲ ರಂಗದಲ್ಲಿಯೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ).—ಮಾನ್ಯ ಸಭಾಪತಿಗಳೇ, ಪ್ರಾರಂಭದಲ್ಲಿಯೇ ಅಧ್ಯಕ್ಷರು ನನ್ನ ಭಾಷಣವನ್ನು ಸ್ವಲ್ಪದರಲ್ಲಿಯೇ ಮುಗಿಸಬೇಕೆಂದು ಹೇಳಿದ್ದಾರೆ. ಕೇವಲ ಕೆಲವೇ ನಿಮಿಷಗಳಲ್ಲಿಯೇ ಮಾತನಾಡಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ಮೊಟ್ಟ ಮೊದಲನೆಯದಾಗಿ ಇಂತಹ ಒಂದು ಒಳ್ಳೆಯ ನಿರ್ಣಯವನ್ನು ಮಾನ್ಯ ಶ್ರೀ ಶಾಮಣ್ಣನವರು ತಂದಿರುವುದರಿಂದ ಅವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಈ ಠರಾವು ನೋಡುವುದಕ್ಕೆ ಬಹಳ ಸಣ್ಣ ದಾದಂಥ ಠರಾವಾಗಿದ್ದರೂ ಇದು ಬಹಳ ಮಹತ್ವ ಪೂರಿತವಾದಂಥ ಠರಾವು ಆಗಿದೆ. ನಾನು

ಅನೇಕ ದೇಶಗಳನ್ನು ಸುತ್ತಾಡಿ ಬಂದಿದ್ದೇನೆ. ನಾನು ಈ ತಿಂಗಳು 11ನೇ ತಾರೀಖಿನಲ್ಲಿ ಆಂಧ್ರ ಪ್ರಾಂತ್ಯಕ್ಕೆ ಹೋದಾಗ್ಗೆ ನನಗೆ ಅಲ್ಲಿ ಅವರ ಭಾಷೆ ತಿಳಿಯಲಿಲ್ಲ. ಆದರೆ ಅವರ ಒಂದು ಅಭಿಮಾನ ನೋಡಿ ಬಹಳ ಸಂತೋಷವಾಯಿತು. ಹೈದರಾಬಾದಿನಲ್ಲಿ ಅವರ ಒಂದು ರಾಜ್ಯದ ಆಡಳಿತ ಭಾಷೆಯ ಬಗ್ಗೆ ಅವರು ಇಟ್ಟಿರುವ ಪ್ರೀತಿ ನೋಡಿ ನನಗೆ ಬಹಳವಾಗಿ ಆನಂದವಾಯ್ತು. ಆದರೆ ನಮ್ಮ ಇಲ್ಲಿನ ಸ್ಥಿತಿ ನೋಡಿ ನನಗೆ ಬಹಳ ವೇದನೆಯಾಯಿತು. ಸರ್ಕಾರ ಈ ರಾಜ್ಯಕ್ಕೆ ಉದಾತ್ತವಾಗಿ ಕರ್ನಾಟಕವೆಂಬ ಹೆಸರನ್ನು ಇಟ್ಟಿದ್ದಾರೆ. ಆದರೆ ಈ ಪ್ರದೇಶದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಬರಬೇಕೋ ಅಷ್ಟು ಇನ್ನೂ ಬರಲಿಲ್ಲ. ನಾವು ಅಸೆಂಬ್ಲಿ ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿದರೆ ಬಹುತೇಕವಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಅನೇಕರು ಭಾಷಣ ಮಾಡಿದ್ದಾರೆ ಮುಕ್ಕಾಲು ಭಾಗ ಅಂದರೆ ಬಹುತೇಕವಾಗಿ ಇಂಗ್ಲಿಷ್‌ನಲ್ಲಿಯೇ ಇದೆ. ತಾತ್ವಿಕ ಸಿದ್ಧಾಂತದ ಪ್ರಕಾರ ಕನ್ನಡದಲ್ಲಿಯೇ ನಡೆಯಬೇಕು. ಈ ಒಂದು ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಾನು ಒಂದೆರಡು ನಿಮಿಷಗಳ ಕಾಲ ಹೆಚ್ಚಿಗೆ ಮಾತನಾಡಲು ಅವಕಾಶವನ್ನು ತಾವು ಕೊಡಬೇಕು. ಸಮಾಜದಲ್ಲಿ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಯಾವ ರೀತಿ ತಾಯಿಯಾದವಳು ತನ್ನ ಹಾಲನ್ನು ಕೊಟ್ಟು ಸಾಕಿ ಸಲಹುತ್ತಾಳೋ ಅದೇ ರೀತಿಯಲ್ಲಿ ಒಂದು ಸದ್ಭಾವನೆಯಿಂದ ಸರ್ಕಾರ ಈ ರಾಜ್ಯದಲ್ಲಿ ತನ್ನ ಮಾತೃಭಾಷೆಯಾದ ಕನ್ನಡ ಭಾಷೆಯ ಬೆಳವಣಿಗೆ ಬಗ್ಗೆ ಹೆಚ್ಚಿನ ಶಕ್ತಿಯಿಂದ ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಮಗುವಿಗೆ ತಾಯಿ ಹಾಲಿನಿಂದ ಒಂದು ಶಕ್ತಿ ಹಾಗೂ ಒಂದು ಸದ್ಭಾವನೆ ಉಂಟಾಗುವಂತೆ ರಾಜ್ಯಾಡಳಿತದ ಭಾಷೆಯಾಗಿ ಕನ್ನಡವನ್ನು ಮಾಡುವುದರಿಂದ ಸರ್ಕಾರಕ್ಕೆ ಒಂದು ಹೆಚ್ಚಿನ ಶಕ್ತಿ ಹಾಗೂ ಜನರ ಪ್ರೇಮ, ವಿಶ್ವಾಸ ಉಂಟಾಗುತ್ತದೆ. ನಾನು ಈ ವಿಚಾರವನ್ನು ಇಂಟರ್‌ನ್ಯಾಷನಲ್ ದೃಷ್ಟಿಯಿಂದ ದೊಡ್ಡದಾಗಿ ಮಾತನಾಡುತ್ತಾ ಇಲ್ಲ. ಆದರೆ ರಾಷ್ಟ್ರದ ಹಿತದೃಷ್ಟಿಯಿಂದ ಮಾತ್ರ ನಾನು ಮಾತನಾಡುತ್ತಿದ್ದೇನೆ. ಹಿಂದಿನ ಸಂಸ್ಕೃತಿಯನ್ನು ಅನುಸರಿಸಿ ನಾನು ಮಾತದಾಡುತ್ತಿದ್ದೇನೆ. ಹಿಂದೆ ದೊಡ್ಡ ದೊಡ್ಡ ಪಂಡಿತರು ಅನೇಕ ಧಾರ್ಮಿಕ ಗ್ರಂಥಗಳಲ್ಲಿ ನಮ್ಮ ಹಿಂದಿನ ಸಂಸ್ಕೃತಿಯ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಬಸವಣ್ಣನವರೇ ಒಂದು ಮಾತನ್ನು ಹೇಳಿದ್ದಾರೆ. ಎನಗಿಂತ ಕಿರಿಯರಿಲ್ಲವೆಂದು. ಅದು ನಮ್ಮ ಜನತೆಗೆ ಚೆನ್ನಾಗಿ ತಿಳಿಯಬೇಕು. ಕೋರ್ಟಿನ ಆಡಳಿತವೆಲ್ಲಾ ಇನ್ನೂ ಇಂಗ್ಲಿಷ್‌ನಲ್ಲಿಯೇ ನಡೆಯುತ್ತಾ ಇರುವುದರಿಂದ ವಕೀಲರೇನಾದರೂ ಆರ್ಗ್ಯುಮೆಂಟ್ ಮಾಡುತ್ತಿದ್ದರೆ ಅಪರಾಧಿಗೆ ಅದು ಯಾವುದೂ ಅರ್ಥವಾಗದೇ ಸುಮ್ಮನೆ ನಿಂತಿರುತ್ತಾನೆ. ಅವನಿಗೆ ಶಿಕ್ಷೆಯಾಗಬೇಕೆಂದು ಹೇಳಿದರೆ ಅದೂ ಸಹ ಗೊತ್ತಾಗುವುದಿಲ್ಲ. ವಕೀಲರೇನಾದರೂ ಇವತ್ತು ನಿನಗೆ ಬಿಡುಗಡೆಯಾಗಿದೆಯೆಂಬುದಾಗಿ ಹೇಳಿದರೆ ಅವನು ತನಗೆ ಶಿಕ್ಷೆಯಾಗಬೇಕೆಂದು ಹೇಳಿದರೆಂದು ತಿಳಿದುಕೊಳ್ಳುತ್ತಾನೆ. ಇವತ್ತು ನಿಜವಾಗಿ ಯುನಿವರ್ಸಿಟಿ ಶಿಕ್ಷಣದಲ್ಲಿ ತರಬೇತು ಹೊಂದಿದವರಿಗೂ, ಇಂಜಿನಿಯರಿಂಗ್ ಶಿಕ್ಷಣ ಪಡೆದವರಿಗೂ ಅನೇಕ ಸಂದರ್ಭಗಳಲ್ಲಿ ಇಂತಹ ತೊಂದರೆಗಳು ಉಂಟಾಗುತ್ತವೆ ಕನ್ನಡ ಭಾಷೆಯಲ್ಲಿ ಅಲ್ಲಿನ ಶಿಕ್ಷಣ ಸಾಕಷ್ಟು ಅರ್ಥವಾಗುವುದಕ್ಕೆ ಅವಕಾಶವೇ ಇಲ್ಲ. ಬರೀ ಕನ್ನಡ ಭಾಷೆ ಕಲಿಯುವ ಹುಡುಗರಿಗೆ ವೈದ್ಯಕೀಯ ಶಾಸ್ತ್ರ, ಇಂಜಿನಿಯರಿಂಗ್, ಟೆಕ್ನಿಕಲ್, ಸೈನ್ಸ್ ಶಿಕ್ಷಣದಿಂದ ಎಷ್ಟರ ಮಟ್ಟಿಗೆ ಸ್ಫೂರ್ತಿ ಬಂದೀತೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಭಾಷೆಯ ಬಗ್ಗೆ ಸ್ಫೂರ್ತಿ ಬಂದಿರುವ ಹಾಗೆ ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯ ಬಗ್ಗೆ ಹೆಚ್ಚಿನ ಸ್ಫೂರ್ತಿ ಬರುವ ಹಾಗೆ ಮಾಡಬೇಕು. ಇವತ್ತಿನ ದಿವಸ ಸಾಮಾನ್ಯವಾಗಿ ನಾವು ಸಿಟ್ಟು ಮಾಡುವಾಗಾಗಲೀ ಅಥವಾ ಪ್ರೀತಿ ಮಾಡುವಾಗಾಗಲೀ ನಾವು ಕನ್ನಡ ಭಾಷೆಯಲ್ಲಿ ಮಾತನಾಡುವಾಗ ನಮಗೆ ನಮ್ಮ ಮಾತೃಭಾಷೆಯಲ್ಲಿ ಸಿಗುವಷ್ಟು ಆನಂದ ಪರಭಾಷೆಗಳಲ್ಲಿ ಸಿಗುವುದಿಲ್ಲ.

ಇವತ್ತು ಪರಭಾಷೆ ವಿರುದ್ಧವಾಗಿ ಇಲ್ಲಿ ಪ್ರಶ್ನೆ ಉದ್ಭವವಾಗಿಲ್ಲ. ಇವತ್ತು ಬೇಕಾದರೆ ಹಿಂದಿ ಕಲಿಯಿರಿ, ಪರ್ಶಿಯನ್ ಭಾಷೆ ಕಲಿಯಿರಿ, ಜರ್ಮನಿ, ಫ್ರೆಂಚ್ ಕಲಿಯಿರಿ. ಆದರೆ ಇವತ್ತು ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಎತ್ತರವಾದ ಆರೋಗ್ಯಕರವಾದ ಪದ್ಧತಿ ಎಂದರೆ ಮಾತೃಭಾಷೆಯನ್ನು ತಿಳಿದಿರಬೇಕು. ಆದರೆ ಇವತ್ತು ಬಿ.ಎ., ಕ್ಲಾಸ್‌ನಲ್ಲಿ ಓದುತ್ತಿರತಕ್ಕಂಥ ಹುಡುಗರಿಗೆ ಹುಡುಗಿಯರನ್ನು ನೋಡಿದಾಗ ಸಿಳ್ಳೆ ಹೊಡೆಯುವುದು ಒಂದೇ ಗೊತ್ತಿದೆಯೇ ವಿನಹಃ ಅವರ ತಲೆಗೆ ಏನೂ ಹತ್ತುವುದಿಲ್ಲ. ಅವರು ಪರೀಕ್ಷೆಗೆ ಹೋಗುವಾಗ ಕೆಲವಾರು ಪಾಯಿಂಟ್ಸ್‌ಗಳನ್ನು

ನೋಟ್ ಮಾಡಿಕೊಂಡು ಬಾಯಿಪಾಠ ಮಾಡಿಕೊಂಡು ಹೋಗುತ್ತಾರೆ ಅಲ್ಲಿ ಒಂದು ಶಬ್ದ ತಪ್ಪಿ ಹೋದರೆ ಅವರಿಗೆ ಮುಂದೆ ಏನು ಬರೆಯಬೇಕು ಎಂಬುದೇ ಗೊತ್ತಾಗುವುದಿಲ್ಲ. ಇಂಥ ಪದ್ಧತಿ ಏನಿದೆ ಅದು ತಪ್ಪಬೇಕು. ಇವತ್ತು ನಮ್ಮ ಕನ್ನಡ ಅಭಿವೃದ್ಧಿಗಾಗಿ ಬಡ್ಜೆಟ್‌ನಲ್ಲಿ ಹಣವನ್ನು ಇಟ್ಟಿರ ದಿದ್ದರೆ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಇಡಿ ನಾವು ಬೇಡವೆಂದು ಹೇಳುವುದಿಲ್ಲ. ಇವತ್ತು ಪೋಲಿಸ್, ಬಡ್ಜೆಟ್‌ನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಇವತ್ತು ಪೋಲಿಸ್ ಬಡ್ಜೆಟ ಜಾಸ್ತಿಯಾಗುತ್ತಾ ಹೋಗುತ್ತಿರುವುದಕ್ಕೆ ಕಾರಣ ಕ್ರಿಮಿನಲ್ ಮೆಂಟಾಲಿಟಿ. ಇವತ್ತು ಹಿಂದೂ ಮುಸ್ಲಿಂಗಳಲ್ಲಿ ಒಬ್ಬರಿಗೊಬ್ಬರ ವಿಚಾರ ತಿಳಿಯುವುದಿಲ್ಲ ಭಾಷೆ ತಿಳಿಯದಿದ್ದರೆ ಒಬ್ಬರಿಗೊಬ್ಬರಿಗೆ ವೈಷಮ್ಯ ಬೆಳೆಯುತ್ತದೆ. ಇವತ್ತು ತುರ್ತುಪರಿಸ್ಥಿತಿಯನ್ನು ತಂದಿರತಕ್ಕಂಥದ್ದು ನಿಜವಾಗಿಯೂ ಒಂದು ದೃಷ್ಟಿಯಲ್ಲಿ ಬಹಳ ಒಳ್ಳೆಯದು. ಏತಕ್ಕೆಂದರೆ ಹುಡುಗರು ಪರೀಕ್ಷೆ ಬಂದ ಕೂಡಲೇ ಏನಾದರೂ ಒಂದು ಮೂವ್‌ಮೆಂಟ್ ಮಾಡುತ್ತಿದ್ದರು ಇವತ್ತು ಅದು ತಪ್ಪಿದೆ ಇವತ್ತು ಕೋರ್ಟ್ ಕಛೇರಿಗಳಲ್ಲಿ ಕಾಲೇಜಿನಲ್ಲಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತನ್ನಿ. ಅದಕ್ಕೆ ಎಷ್ಟು ಬೇಕಾದರೂ ಟ್ಯಾಕ್ಸ್ ಹಾಕಿ. ಬಾಕಿ ಟ್ಯಾಕ್ಸ್‌ಗಳಿಗೆ ನಾವು ವಿರೋಧ ಮಾಡಿದರೂ ಕೂಡ ಇದಕ್ಕೆ ಮಾತ್ರ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ. ಇವತ್ತು ಶ್ರೀ ಶಾಮಣ್ಣನವರು ತಂದಿರತಕ್ಕಂಥ ನಿರ್ಣಯವೇನಿದೆ ಅದು ಬಹಳ ಸೂಕ್ತವಾಗಿದೆ; ಅರ್ಥದರ್ಶಿತವಾಗಿದೆ. ನಮ್ಮ ದೇಶಕ್ಕೆ ಭಾಷೆಯ ಪ್ರಧಾನ್ಯತೆ ಇವೆ. ಇವತ್ತು ನಮ್ಮ ಮಾತುಗಳನ್ನು ಇನ್ನೊಬ್ಬರಿಗೆ ಸರಿಯಾಗಿ ಅರ್ಥವಾಗದ ಜಗಳಗಳು ಆಗುತ್ತವೆ.

ನಾನು ಬೇಕಾದರೆ ಇವತ್ತು ಇಂಗ್ಲಿಷ್‌ನಲ್ಲಿ ಭಾಷಣ ಮಾಡುತ್ತೇನೆ, ಆದರೆ ಕನ್ನಡದ ಮೇಲಿನ ಅಭಿಮಾನದಿಂದ ಕನ್ನಡದಲ್ಲಿಯೇ ಮಾತನಾಡುತ್ತಿದ್ದೇನೆ. ಇವತ್ತು ಅಧ್ಯಕ್ಷರು, ಕಾರವಾರದಿಂದ ಬಂದಿದ್ದಾರೆ ಅವರಿಗೂ ಕೂಡ ಸಾಕಷ್ಟು ಕನ್ನಡದ ಬಗ್ಗೆ ಅಭಿಮಾನವಿದೆ. ಆದರೂ ಅವರ ಕಡೆಯ ಭಾಷೆಯಾದ ತುಳು ಮತ್ತು ಕೊಂಕಣಿಯಲ್ಲಿ ಮಾತನಾಡುತ್ತಿರುತ್ತಾರೆ. ಇಲ್ಲಿ ಮರಾಠಿ ಭಾಷೆ ಮಾತನಾಡತಕ್ಕಂಥವರು ಇರಲೀ ಉರ್ದು ಭಾಷೆ ಮಾತನಾಡತಕ್ಕಂಥವರೆ ಇರಲೀ ಯಾರೇ ಇರಲಿ, ಕನ್ನಡ ಮಾತೃಭಾಷೆಯಾಗುವ ಬಗ್ಗೆ ತಾವು ಒಂದು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ನಿಗದಿ ಮಾಡಿಕೊಂಡು ಅದರಂತೆ ಜಾರಿಗೆ ತನ್ನಿ. ಈಗ ಬೇರೆ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕೋಸ್ಕರ ತಾವು ಹೇಗೆ 20 ಅಂಶದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೋ ಅದರಂತೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವ ಬಗ್ಗೆ ತಾವು ಒಂದು ಕಟ್ಟುನಿಟ್ಟಾಗಿ ಕಾರ್ಯಕ್ರಮವನ್ನು ಹಾಕಿಕೊಂಡು ಜಾರಿಗೆ ತನ್ನಿ. ಇದನ್ನು ಆದಷ್ಟು ಬೇಗ ತಾವು ಜಾರಿಗೆ ತರಬೇಕೆಂದು ತಮ್ಮಲ್ಲಿ ಸೆರಗೊಡ್ಡಿ ಬೇಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

† SRI V. N PATIL (Humnabad) [Spoke in Urdu]

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಅಧ್ಯಕ್ಷರೇ. ಈ ದಿವಸ ಮಾನ್ಯ ಶಾಮಣ್ಣನವರು ಈ ಒಂದು ನಿರ್ಣಯವನ್ನು ತೆಗೆದುಕೊಂಡು ಬಂದು, ಈ ನಿರ್ಣಯದ ಮೇಲೆ ಚರ್ಚೆ ನಡೆದು. 7 ಜನ ಸನ್ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ಯಾವ ರೀತಿಯಲ್ಲಿ ಈ ಕನ್ನಡ ಮಾಧ್ಯಮವನ್ನು ಜಾರಿಗೊಳಿಸತಕ್ಕದ್ದು, ಹಾಗೂ ಆಡಳಿತದ ಎಲ್ಲಾ ಮಟ್ಟದಲ್ಲೂ ಕನ್ನಡವನ್ನು ಕಟ್ಟುನಿಟ್ಟಾಗಿ, ಹಾಗೂ ಪರಿಣಾಮಕಾರಿಯಾಗಿ ಬಳಸಬೇಕು ಎನ್ನತಕ್ಕದ್ದರ ಬಗ್ಗೆ ಅವರು ಸಲಹೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಮಾತನಾಡುತಾ, ಈ ಒಂದು ಕನ್ನಡ ಮಾಧ್ಯಮವನ್ನು ಜಾರಿಗೊಳಿಸತಕ್ಕದ್ದು, ಎಲ್ಲಾ ಮಟ್ಟದಲ್ಲೂ ಕೂಡ ಆಡಳಿತ ದೃಷ್ಟಿಯಲ್ಲಿ ಕನ್ನಡವನ್ನು ಕಟ್ಟುನಿಟ್ಟಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಬೇಕು ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಈ ಒಂದು ನಿರ್ಣಯದಲ್ಲಿ ಎರಡು ಭಾಗ ಇದೆ, ಮೊದಲನೇ ಭಾಗದಲ್ಲಿ ಈ ಒಂದು ಕನ್ನಡವನ್ನು ಶಾಲಾ ಕಾಲೇಜುಗಳಲ್ಲಿ ಮಾಧ್ಯಮವಾಗಿ ಮಾಡತಕ್ಕ ವಿಷಯ.

ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಮಟ್ಟದಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿರುವುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ವಿಚಾರ ಕನ್ನಡ ಭಾಷೆ, ನಮ್ಮ ಮಾತೃಭಾಷೆಯಾಗಿರುವುದರಿಂದ, ಮತ್ತು ಪ್ರಾದೇಶಿಕ ಭಾಷೆಯಾಗಿರುವುದರಿಂದ, ಹಾಗೂ ಬಹಳ ಜನರು ಈ ಭಾಷೆಯಲ್ಲಿ ಮಾತನಾಡುವವರಿರುವುದರಿಂದ, ಪ್ರಾಥಮಿಕ ಮಟ್ಟದಲ್ಲಿ ಕನ್ನಡ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿದ್ದೇವೆ. ಅಷ್ಟೇ ಅಲ್ಲದೆ, ಇದಕ್ಕೆ ಬೇಕಾದ ಎಲ್ಲ ಅನುಕೂಲಗಳನ್ನೂ ಸರ್ಕಾರದವರು ಮಾಡಿದ್ದಾರೆ.

ಇಲ್ಲಿ ನಾನು ಒಂದು ಮಾತನ್ನು ಘನಸಭೆಯ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, ಮೂವತ್ತನೇ ರಾಜ್ಯಾಂಗದ ವಿಧಿ ಪ್ರಕಾರವಾಗಿ ಯಾರು ಬೇರೆ ಬೇರೆ ಭಾಷೆಯನ್ನು ಮಾತನಾಡುವವರು ಇದ್ದಾರೆ. ಅವರ ಮಕ್ಕಳಿಗೆ, ಅವರ ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ದೊರಕಿಸಿಕೊಡಬೇಕು ಎಂದು ಕೇಳಿದಾಗ ನಾವು ಅದನ್ನು ನಿರಾಕರಿಸುವುದಕ್ಕೆ ಸಾಧ್ಯವಿಲ್ಲ. ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಸಿ. ಎನ್. ಪಾಟೀಲರು ಕನ್ನಡದವರಾಗಿದ್ದರೂ, ಉರ್ದು ಶಿಕ್ಷಣ ಮಾಧ್ಯಮದಲ್ಲಿ ಅಧ್ಯಯನ ಮಾಡಿ, ವಿಶ್ವವಿದ್ಯಾನಿಲಯದ ಪದವಿ, ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಅವರು ಇಂದು ಉರ್ದು ಭಾಷೆಯಲ್ಲಿ ಬಹಳ ಚೆನ್ನಾಗಿ ಮಾತನಾಡಿದರು. ನಾನೂ ಕೂಡ ಉರ್ದು ಭಾಷೆಯನ್ನು ಕಲಿಯುತ್ತಿದ್ದೇನೆ. ಅವರು ಹೇಳಿದ ಭಾಷಣದಲ್ಲಿ ಕೆಲವು ಪದಗಳು ಅರ್ಥವಾಗದಿದ್ದರೂ ನಾನು ಸ್ವಲ್ಪ ಭಾಗವನ್ನು ಅರ್ಥ ಮಾಡಿಕೊಂಡೆ. ಉರ್ದು ಜೊತೆಗೆ, ಮರಾಠಿ, ತೆಲುಗು, ತಮಿಳು ಮತ್ತು ಇಂಗ್ಲಿಷ್ ಮಾತೃಭಾಷೆಯಾಗಿರುವ ಆಂಗ್ಲೋ-ಇಂಡಿಯನ್ಸ್-ಇವರೆಲ್ಲಾ ಅವರವರ ಮಾತೃಭಾಷೆಯಲ್ಲೇ ಶಿಕ್ಷಣ ಕೊಡಬೇಕು ಎಂದು ಬೇಡಿಕೆ ತಂದಾಗ, ಅಂಥಾ ಕಡೆ ನಾವು ಪ್ರೌಢ ಶಿಕ್ಷಣ ಮಟ್ಟದಲ್ಲಿ ಹತ್ತನೇ ತರಗತಿಯವರೆಗೆ ಈ ಅವಕಾಶವನ್ನು ಕೊಡಬೇಕಾಗಿದೆ.

4-00 P.M.

ವಿದ್ಯಾಭ್ಯಾಸದ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ರಚಿಸಲಾಗಿರುವ ರಾಜ್ಯ ಮಟ್ಟದ ಶಿಕ್ಷಣ ಸಲಹಾ ಸಮಿತಿಯಲ್ಲಿ, ಕನ್ನಡವನ್ನೂ ಕೂಡ ಕಡ್ಡಾಯವಾಗಿ ಕಲಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಈ ತೀರ್ಮಾನ ಈಗ ಪರಿಶೀಲನೆಯಲ್ಲಿದೆ. ಇವತ್ತಿನದಿವಸ ನರ್ಸರಿ ಶಾಲೆಗಳಿಗೆ ರಾಜ್ಯದ ಎಲ್ಲ ಕಡೆಗಳಿಂದ ಬೇಡಿಕೆ ಬರುತ್ತಿದೆ. ದೊಡ್ಡ ದೊಡ್ಡ ನಗರಗಳಿಂದ, ತಾಲ್ಲೂಕು ಕೇಂದ್ರಗಳಿಂದ, ಹೋಬಳಿ ಕೇಂದ್ರಗಳಿಂದ ಮತ್ತು ದೊಡ್ಡ ದೊಡ್ಡ ಹಳ್ಳಿಗಳಿಂದಲೂ ಕೂಡ, ಇಂಗ್ಲಿಷ್ ಮಾಧ್ಯಮದಲ್ಲಿ ನಡೆಯುವ ನರ್ಸರಿ ಶಾಲೆಗಳಿಗೆ ಅವಕಾಶ ಕೊಡಬೇಕೆಂದು ಬೇಡಿಕೆಗಳು ಬಹಳವಾಗಿ ಬರುತ್ತಿವೆ. ''ಸ್ವಾಮಿ, ದೊಡ್ಡ ದೊಡ್ಡ ಅಧಿಕಾರಿಗಳು ಮತ್ತು ನಿಮ್ಮಂಥ ಮಂತ್ರಿಗಳು ಮತ್ತಿತರರು ಪಟ್ಟಣಗಳಲ್ಲಿ ವಾಸ ಮಾಡುವವರು, ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳುಹಿಸುತ್ತಿದ್ದೀರಿ; ಐ. ಎ. ಎಸ್., ಐ. ಪಿ. ಎಸ್. ಮುಂತಾದ ಕಾಂಪಿಟೆಟೀವ್ ಪರೀಕ್ಷೆಗಳಲ್ಲಿ ನಿಮ್ಮ ಮಕ್ಕಳು ಹೋಗುತ್ತಿದ್ದಾರೆ; ಹಾಗೆಯೇ ನಮ್ಮ ಮಕ್ಕಳು ಏತಕ್ಕೆ ಹೋಗಬಾರದು'' ಎಂದು ಅವರು ಕೇಳುತ್ತಿದ್ದಾರೆ. ಹೀಗೆ ಬೇಡಿಕೆಗಳು ನಮಗೆ ಬಂದರೂ ಕೂಡ, ಅವುಗಳನ್ನು ಪರಿಶೀಲನೆ ಮಾಡಿ, ಅಲ್ಲಿ ಅವಶ್ಯಕತೆ ಇದ್ದರೆ ಮಾತ್ರ ಮಂಜೂರು ಮಾಡುತ್ತಿದ್ದೇವೆ. ನಾನು ಮೊನ್ನೆತಾನೆ ದಕ್ಷಿಣ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಸುಂಕೇರಿ ಎಂಬ ಊರಿನಲ್ಲಿ ಒಂದು ನರ್ಸರಿ ಶಾಲೆಗೆ ಬೇಡಿಕೆ ಬಂದಿತ್ತು. ಅವರು, ನಮಗೆ ಅನುದಾನ ಬೇಡ ಏನೂ ಬೇಡ, ಅಪ್ಪಣೆಯೊಂದನ್ನು ಕೊಡಿ ಎಂದು ಕೇಳುತ್ತಿದ್ದರು. ಹಡಗಿನಲ್ಲಿ ಕೆಲಸ ಮಾಡುವವರು ಬೇರೆ ಬೇರೆ ಪ್ರಾಂತ್ಯಗಳಿಂದ ಬಂದು ಇಲ್ಲಿ ಕೆಲಸ ಮಾಡುವವರು ಸದಾ ಸಮುದ್ರದಲ್ಲಿ ಕೆಲಸ ಮಾಡುವವರ ಮಕ್ಕಳು ಇದ್ದಾರೆ. ಅಲ್ಲಿ ಬಹಳ ಜನ ಇಂಗ್ಲಿಷ್ ಮಾತೃಭಾಷೆಯವರು ಇದ್ದಾರೆ. ಅಷ್ಟೇ ಅಲ್ಲದೆ, ತುಳು, ಕೊಂಕಣಿ, ಉರ್ದು ಮತ್ತು ಮಲೆಯಾಳಂ ಮಾತನಾಡುವವರು ಇದ್ದಾರೆ. ಇವರೆಲ್ಲಾ ಅಲ್ಲಿ ಒಂದು ಇಂಗ್ಲಿಷ್ ನರ್ಸರಿ ಶಾಲೆ ಪ್ರಾರಂಭ ಮಾಡುವುದಕ್ಕೆ ಸರ್ಕಾರದ ಅಪ್ಪಣೆ ಕೇಳಿದರು. ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ಶಿಕ್ಷಣಕ್ಕೆ ಆದಷ್ಟು ಅಪ್ಪಣೆ ಕೊಡಕೂಡದು ಎಂದು ನಮ್ಮ ಸರ್ಕಾರದ ನೀತಿ ಇದೆ. ಆದರೂ ಕೂಡ, ಕೆಲವು ಸಂದರ್ಭಗಳಲ್ಲಿ, ಕೇಂದ್ರ ಸರ್ಕಾರದ ಅಧಿಕಾರಿಗಳು ಹೆಚ್ಚು ಸಂಖ್ಯೆಯಲ್ಲಿರುತ್ತಾರೆ, ಸೆಂಟ್ರಲ್ ರೆವಿನ್ಯೂ, ರೈಲ್ವೆ ಮುಂತಾದ ಇಲಾಖೆಗಳಿಂದ ಬಂದಂತಹ ಅಧಿಕಾರಿಗಳು ಇರುತ್ತಾರೆ. ಅಲ್ಲದೆ ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರೂ ಅಲ್ಲಿ ಇರುತ್ತಾರೆ. ಬೆಂಗಳೂರು ನಗರದಲ್ಲಿ ರಕ್ಷಣಾ ಇಲಾಖೆಯವರಿರುವ ಕಾಲೋನಿಯಲ್ಲಿ ಅತ್ಯವಶ್ಯಕವಾಗಿ ಇಂಗ್ಲಿಷ್ ನರ್ಸರಿ ಶಾಲೆಗೆ ಪರ್ಮಿಷನ್ ಕೊಡಬೇಕಾದ ಸಂದರ್ಭ ಬರುತ್ತದೆ. ಇಂಥಾ ಕಡೆಗಳಲ್ಲೂ ಏತಕ್ಕೆ ಕನ್ನಡವನ್ನು ಅವರಿಗೆ ಕಲಿಸಬಾರದು ಎಂದು ನಾವು ಶಿಕ್ಷಣ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಈಗ ಅದು ಪರಿಶೀಲನೆಯಲ್ಲಿದೆ. ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಒಂದು ಇಂಗ್ಲಿಷ್ ನರ್ಸರಿ ಶಾಲೆಗೆ ಅಪ್ಪಣೆ ಕೊಟ್ಟಾಗ, ಈ ಒಂದು ನಿಯಮವನ್ನೂ ಕೂಡ ನಾವು ಹಾಕಿದ್ದೇವೆ. ಆದುದರಿಂದ, ನಾವು ರಾಜ್ಯಾಂಗ ವಿಧಿಯಲ್ಲಿರತಕ್ಕ ತತ್ವಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು, ಬೇರೆ ಇತರ ಅಲ್ಪಸಂಖ್ಯಾತರ ಮಕ್ಕಳಿಗೂ ಈ ಸೌಲಭ್ಯವನ್ನು ಒದಗಿಸುತ್ತಿದ್ದೇವೆ. ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಎಲ್ಲರಿಗೂ ಕೂಡ ನಾವು ಕನ್ನಡವನ್ನು ಕಲಿಸಬೇಕು ಎನ್ನುವುದು ನಮ್ಮ ತತ್ವವಿದ್ದರೂ ಕೂಡ, ಕಡ್ಡಾಯವಾಗಿ ಈ ಕಾರಣಗಳಿಂದ

ಕಲಿಸುವುದಕ್ಕೆ ಆಗುತ್ತಾ ಇಲ್ಲ. ನಮ್ಮ ರಾಜ್ಯದಲ್ಲಿ ಸುಮಾರು ಮೂವತ್ತೈದು ಸಾವಿರ ವಿದ್ಯಾರ್ಥಿಗಳು ನಮಗೆ ಉರ್ದು ಭಾಷೆಯಲ್ಲಿ ಶಿಕ್ಷಣ ಮಾಧ್ಯಮ ಬೇಕು ಎಂದು ಹೇಳಿ, ಅವರು ಉರ್ದು ಮಾಧ್ಯಮದಲ್ಲೇ ಅಭ್ಯಾಸ ಮಾಡುತ್ತಿದ್ದಾರೆ. ಇದರ ಜೊತೆಗೆ, ಭರತ ಖಂಡದ ಎಲ್ಲ ರಾಜ್ಯಗಳಲ್ಲೂ ಕೂಡ ಮೂರು-ನಾಲ್ಕು ತರಗತಿಗಳವರೆಗೆ ಅವರವರ ರಾಜ್ಯಗಳಲ್ಲಿ ಇಂಗ್ಲಿಷ್ ಶಾಲೆಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮಲ್ಲೂ ಕೂಡ ಇದೇ ಪದ್ಧತಿ ಬೆಳೆದುಕೊಂಡು ಬಂದಿದೆ. ಆದರೂ ಕೂಡ, ನಾವು ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ತೀರ್ಮಾನ ಇನ್ನೂ ಪರಿಶೀಲನೆಯಲ್ಲಿ ಇದೆ. ಎಲ್ಲ ರೀತಿಯ ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ಪ್ರೊಫೆಷನಲ್ ಇನ್‌ಸ್ಟಿಟ್ಯೂಷನ್ಸ್-ಇವುಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮ ಕ್ರಮೇಣವಾಗಿ ಜಾರಿಗೆ ಬರಬೇಕಾಗಿದೆ. ಇಲ್ಲದಿದ್ದರೆ, ಎಲ್ಲ ಪುಸ್ತಕಗಳನ್ನೂ ನಾವು ತರ್ಜುಮೆ ಮಾಡಬೇಕಾಗಿರುವುದರಿಂದ, ಇದನ್ನು ಸುಲಭವಾಗಿ ಕಡೆಗಣಿಸುವ ವಿಚಾರವಲ್ಲ. ಇವತ್ತು, ಇಡೀ ವಿಶ್ವದಲ್ಲಿ ಜ್ಞಾನ ಸಂಪತ್ತು ಮಿಂಚಿನ ವೇಗದಲ್ಲಿ ಬೆಳೆಯುತ್ತಿದೆ. ಇಂದು ನಾವು ಯಾವುದನ್ನು ಸತ್ಯ ಎಂದು ತಿಳಿದುಕೊಂಡಿದ್ದೇವೆ, ಅದು ಬಹುಶಃ, ನಾಳೆ ಅಸತ್ಯವಾಗಬಹುದು. ಹೀಗೆ ಜ್ಞಾನ ಸಂಪತ್ತು ಮಿಂಚಿನ ವೇಗದಲ್ಲಿ ಬೆಳೆಯುತ್ತಿರುವುದರಿಂದ, ನಾವು ಹಿಂದೆ ಬೀಳತಕ್ಕ ಸಂದರ್ಭ ಕೂಡ ಉದ್ಭವಿಸಬಹುದು. ಕನ್ನಡವನ್ನು ಉನ್ನತ ಶಿಕ್ಷಣದಲ್ಲಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡಿದರೆ, ಸಾಕಷ್ಟು ಅರ್ಹತೆ ಇರುವ ಉಪಾಧ್ಯಾಯರುಗಳು ಬೇಕಾಗುತ್ತಾರೆ, ಪಠ್ಯಪುಸ್ತಕಗಳು ಬೇಕಾಗುತ್ತದೆ, ಮತ್ತು ಇದಕ್ಕೆ ಸಂಬಂಧಪಟ್ಟ ಎಲ್ಲಾ ಸೌಲಭ್ಯಗಳೂ ಬೇಕಾಗುತ್ತವೆ. ಆದರೂ ಕೂಡ, ನಾವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕನ್ನಡದಲ್ಲಿ ಬರೆಯುವುದಕ್ಕೆ ಈಗಾಗಲೇ ಅವಕಾಶ ಕೊಟ್ಟಿದ್ದೇವೆ. ಉದಾಹರಣೆಗಾಗಿ, ಉರ್ದು ಓದುವುದಕ್ಕೆ ವಿದ್ಯಾರ್ಥಿಗಳು, ಟಿ.ಸಿ.ಎಚ್. ವಗೈರೆ ಪರೀಕ್ಷೆಗಳಲ್ಲಿ ಉತ್ತರ ಪತ್ರಿಕೆಗಳನ್ನು ಉರ್ದುವಿನಲ್ಲೇ ಬರೆಯುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಈಗಾಗಲೇ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕನ್ನಡದಲ್ಲಿ ಮಾಧ್ಯಮ ಈಗಾಗಲೇ ನಡೆಯುತ್ತಿದೆ. ಅಭ್ಯಾಸಕ್ಕೆ ಇಂಗ್ಲಿಷ್ ಮಾಧ್ಯಮವನ್ನು ತೆಗೆದುಕೊಂಡಿದ್ದರೂ, ಪರೀಕ್ಷೆಗಳಲ್ಲಿ ಉತ್ತರ ಪತ್ರಿಕೆಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಮತ್ತೆ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಸರ್ಕಾರ ಏನು ಮಾಡಿದೆ ಎನ್ನುವುದನ್ನು ಹೇಳಿದ್ದಾರೆ, ಅದರಲ್ಲಿ ಮಾನ್ಯ ಶಾಮಣ್ಣನವರು ಆಡಳಿತದಲ್ಲೂ ಕೂಡ ಕನ್ನಡ ಭಾಷೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತೆಗೆದುಕೊಂಡು ಬರುವುದರ ಬಗ್ಗೆ ಒತ್ತಿ ಹೇಳಿದ್ದಾರೆ. ಈ ದಿಶೆಯಲ್ಲಿ ಸಾಕಾದಷ್ಟು ಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಒಂದು ಇಲಾಖೆಯನ್ನು ಕೂಡ ಪ್ರಾರಂಭ ಮಾಡಿ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳನ್ನು ನೇಮಿಸಿಕೊಳ್ಳುವುದರ ಜೊತೆಗೆ ಎಲ್ಲಾ ವಿಭಾಗದಲ್ಲೂ ಒಬ್ಬೊಬ್ಬರನ್ನು ಕ್ಲಾಸ್ ಒನ್ ಆಫೀಸರನ್ನು ನೇಮಕ ಮಾಡಬೇಕೆಂದು ಈಗಾಗಲೇ ತೀರ್ಮಾನ ಸರ್ಕಾರ ತೆಗೆದುಕೊಂಡಿದೆ. ಮತ್ತೆ ಅದರಲ್ಲಿಯೂ ಗೈಡ್ ಮೆಟೀರಿಯಲ್ಸ್ ಕನ್ನಡ ಪದ ಕೋಶಗಳನ್ನು ತಯಾರು ಮಾಡತಕ್ಕ ಅಧಿಕಾರಿಗಳಿಗೆ, ತರಬೇತಿ ಕೊಡುವುದಕ್ಕೆ, ಟಿಪ್ಪಣಿ ಬರೆಯುವುದಕ್ಕೂ ಸೂಚನೆ ಕೊಟ್ಟಿದ್ದೇವೆ. ಮತ್ತೆ ಎಲ್ಲಾ ವ್ಯವಹಾರಗಳೂ ಕನ್ನಡದಲ್ಲಿಯೇ ಆಗಬೇಕು. ಅಲ್ಲದೆ ಸರ್ಕಾರಿ ಕಛೇರಿಗಳಿಗೆ ಕನ್ನಡ ಟೈಪ್‌ರೈಟರ್ ಒದಗಿಸುವ ವಿಷಯದಲ್ಲಿ ಪ್ರಗತಿಯನ್ನು ಬಹಳಮಟ್ಟಿಗೆ ಸಾಧಿಸಿದ್ದೇವೆ. ಅಲ್ಲದೆ ಕನ್ನಡ ಟೈಪಿಸ್ಟ್ ಕೊಡತಕ್ಕ ವಿಷಯದಲ್ಲೂ ಕೂಡ ಸಾಕಾದಷ್ಟು ಪ್ರಯತ್ನ ಮಾಡಿದ್ದೇವೆ. ಇದರೊಂದಿಗೆ ಕನ್ನಡ ಟೈಪಿಸ್ಟ್‌ಗಳ ಕೊರತೆ ಇರುವುದರಿಂದ ಇಲಾಖೆಯಲ್ಲಿರುವ ಇಂಗ್ಲಿಷ್ ಟೈಪಿಸ್ಟ್‌ಗಳೇ ಕನ್ನಡ ಟೈಪ್‌ರೈಟರ್‌ನ್ನು ಉಪಯೋಗಿಸಿ ಕೆಲಸ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇವೆ, ಇಂಗ್ಲಿಷ್ ಟೈಪಿಸ್ಟ್‌ಗಳನ್ನು ಮನೆಗೆ ಕಳುಹಿಸುವುದಕ್ಕೆ ಆಗುವುದಿಲ್ಲ. ಎಲ್ಲ ರೀತಿಯ ಕೆಲಸಗಳನ್ನೂ ಕನ್ನಡ ಮಾಧ್ಯಮ ಮಾಡುವುದರಲ್ಲಿ; ಆಡಳಿತ ಭಾಷೆ ಮಾಡುವುದರಲ್ಲಿ ಸರ್ಕಾರ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದೆ; ನಾವು ತ್ರಿಭಾಷಾ ಸೂತ್ರವನ್ನೂ ಕೂಡ ಒಪ್ಪಿಕೊಂಡಿದ್ದೇವೆ. ಮಾನ್ಯ ಕೃಷ್ಣನ್‌ರವರು ಇಲ್ಲಿ ಇಲ್ಲ; ಅವರು ರಷ್ಯಾ ದೇಶದ ವಿಷಯವನ್ನು ಹೇಳಿದರು; ಅಲ್ಲಿ ೧೬ ಭಾಷೆಗಳಿದ್ದು, ೧೬ ಭಾಷೆಗಳೂ ಪ್ರಾದೇಶಿಕ ಭಾಷೆಗಳು; ಅಷ್ಟು ಭಾಷೆಗಳಲ್ಲಿ ಆಡಳಿತ ನಡೆದು ಇದರ ಜೊತೆಗೆ ರಾಷ್ಟ್ರಭಾಷೆಯನ್ನು ಕೂಡ ಇಟ್ಟುಕೊಂಡಿದ್ದಾರೆಂದು ಹೇಳಿದರು. ನಮ್ಮಲ್ಲೂ ಕೂಡ ಕಾಲಕ್ರಮೇಣ ಅದೇ ದೃಷ್ಟಿಯಲ್ಲಿ ಸಾಗುತ್ತಾ ಇದ್ದೇವೆ. ಕಳೆದ ಬಾರಿ ಜೂನಿಯರ್ ಕಾಲೇಜನ್ನು ಹಿಂದಿಯಲ್ಲಿ ಮಾಡಬೇಕೆಂದಾಗ ಬಹಳವಾದ ಪ್ರತಿಭಟನೆ ಬಂದರೂ ಕೂಡ ರಾಷ್ಟ್ರಭಾಷೆ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿರುವುದರಿಂದ ಹಿಂದಿ ಜೂನಿಯರ್ ಕಾಲೇಜನ್ನು ಕೂಡ ಮಾಡಿದ್ದೇವೆ. ಮಾನ್ಯ ಸದಸ್ಯರು ಹಾಗೂ ಪಾಟೀಲರು ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಮಾನ್ಯ

ಶಾಮಣ್ಣನವರು ಕೂಡ ಆಡಳಿತದಲ್ಲಿ ಕಟ್ಟುನಿಟ್ಟಾದ ಕನ್ನಡ ಮಾಧ್ಯಮವನ್ನು ಜಾರಿಗೆ ತರುವಂತೆ ಮಾತನಾಡಿದ್ದಾರೆ; ಅವರ ಸಲಹೆಯನ್ನು ಕೂಡ ಒಪ್ಪುತ್ತೇವೆ. ನಮಗೆ ತಾತ್ಕಾಲಿಕವಾಗಿ ಬೇಕಾದಂತ ಸವಲತ್ತುಗಳು ಸಿಗದೇ ಇರುವುದರಿಂದಲೂ, ಜನರನ್ನು ತಯಾರು ಮಾಡಬೇಕೆಂದು ಅಧಿಕಾರಿಗಳಿಗೆ ಸೂಕ್ತವಾದ ತಿಳುವಳಿಕೆ ಕೊಟ್ಟಿದ್ದೇವೆ; ಮಾನ್ಯ ಪಾಟೀಲರು ಗುಲ್ಬರ್ಗ ಎನೂ ಇದೆ; ಅಲ್ಲಿಗೆ ಪೋಸ್ಟ್ ಗ್ರಾಜುಯೇಟ್ಸ್ ಸೆಂಟರ್‌ಗೆ ಸಂಬಂಧಿ ಮತ್ತು ಉರ್ದು ಬಾತಕ್ಕ ಜನರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ; ಅದನ್ನು ಪರಿಶೀಲನೆ ಮಾಡೋಣ. ಬೆಂಗಳೂರಿನಲ್ಲಿ ಮಾಡಿದ್ದೇವೆ; ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿಯೂ ಮಾಡಲಾಗಿದೆ; ಈ ಸಂದರ್ಭದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಹೋಗದೆ; ಆವಶ್ಯಕ ಇದ್ದರೆ; ಸರ್ಕಾರದವರು ಆವಶ್ಯಕತೆಯನ್ನು ಪರಿಗಣಿಸಿ ಪರಿಶೀಲಿಸುತ್ತೇವೆಂದು ಇಷ್ಟು ಮಾತ್ರ ಹೇಳುತ್ತಾ; ಮಾನ್ಯ ಸದಸ್ಯರು ಇವತ್ತಿನ ದಿವಸ ಏನು ನಿರ್ಣಯ ತಂದಿದ್ದಾರೆ ಅದನ್ನು ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಎಲ್ಲಾ ಸದಸ್ಯರು ಕೂಡ ನಾನು ತಂದಿರತಕ್ಕಂಥ ನಿರ್ಣಯದ ಬಗ್ಗೆ ಪೂರ್ಣವಾದ ಒಪ್ಪಿಗೆ ಕೊಟ್ಟಿರತಕ್ಕಂಥದ್ದು ಶ್ಲಾಘನೀಯವಾದುದು; ನಾನು ಅವರಿಗೆ ಚಿರಋಣಿಯಾಗಿದ್ದೇನೆ. ಆದರೆ ಈ ಸಂದರ್ಭದಲ್ಲಿ ಸರ್ಕಾರ ಕನ್ನಡವನ್ನು ಮಾಧ್ಯಮವನ್ನಾಗಿ ಮಾಡುವುದಕ್ಕಾಗಲೀ, ಆಡಳಿತ ಭಾಷೆಯನ್ನಾಗಿ ಮಾಡುವುದರಲ್ಲಾಗಲೀ ಯಾವ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ನಾನು ಹೇಳಲಿಲ್ಲ. ನಾನು ಹೇಳಿರತಕ್ಕದ್ದು ಸಾಧ್ಯವಾದಷ್ಟು ಕಟ್ಟುನಿಟ್ಟಾಗಿ ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡಿದ್ದೇನೆ. ಆಗಲೇ ಮಾನ್ಯ ಮಂತ್ರಿಗಳು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಲಿಂಗ್ವಿಸ್ಟಿಕ್ ಮೈನಾರಿಟಿ, ಸೆಂಟ್ರಲ್ ಸರ್ವೀಸ್‌ನವರು ಮಾತೃಭಾಷೆ ಬೇರೆ ಇಂತಹವರಿಗೆ ರಾಜ್ಯಾಂಗ ಪ್ರಕಾರ ಅನುಕೂಲ ಮಾಡುವುದಕ್ಕೆ ನಮ್ಮ ವಿರೋಧ ಇಲ್ಲ. ತ್ರಿಭಾಷಾ ಸೂತ್ರ ಒಪ್ಪಿಕೊಂಡಿರುವುದರಿಂದ ಅನೇಕ ಸಂದರ್ಭದಲ್ಲಿ ಅದನ್ನು ಅಳವಡಿಸಿಕೊಂಡು ಮಾಡುವುದಕ್ಕೆ ಸಾಧ್ಯವಿದೆ. ಆಡಳಿತ ಭಾಷೆ ಮಾಡಬೇಕಾದರೆ ತಕ್ಷಣ ಮಾಡುವುದಕ್ಕೆ ಅನೇಕ ನ್ಯೂನತೆಗಳು ಇವೆ; ತೊಡಕುಗಳು ಇವೆ; ಹಂತ ಹಂತವಾಗಿ ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಸಚಿವರ ಭರವಸೆ ಮೇಲೆ; ಮತ್ತೊಮ್ಮೆ ದೂರಿಗೆ ಅವಕಾಶ ಕೊಡದೇ ಸಾಕಾದಷ್ಟು ಶ್ರದ್ಧೆ ವಹಿಸಿ ಪರಿಣಾಮಕಾರಿಯಾಗಿ ಜಾರಿಗೆ ತರಬೇಕೆಂದು ಹೇಳಿ; ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಇದೆಯೆ ?

ಮಾನ್ಯ ಸದಸ್ಯರು.—ಆಗಬಹುದು.

ಉಪಾಧ್ಯಕ್ಷರು.—ಸಭೆಯ ಅನುಮತಿ ಮೇರೆಗೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

The Resolution was by leave withdrawn.

(ii) re: establishment of Munsiff Magistrate Court in every taluk headquarters.

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅಪ್ಪಣೆ ಕೇಳಿಕೊಂಡು ಈ ನಿರ್ಣಯವನ್ನು ಮಂಡಿಸಲು ಇಚ್ಛಿಸುತ್ತೇನೆ.

"ರಾಜ್ಯದಲ್ಲಿಯ ಪ್ರತಿಯೊಂದು ತಾಲ್ಲೂಕಿನ ಮುಖ್ಯ ಸ್ಥಳದಲ್ಲಿ ಕನಿಷ್ಠ ಒಂದು ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಸ್ಥಾಪಿಸಿ ಈ ನ್ಯಾಯಾಲಯದ ನ್ಯಾಯಾಧೀಶರಿಗೆ ಆಯಾ ತಾಲ್ಲೂಕಿನ ಸಿವಿಲ್, ಕ್ರಿಮಿನಲ್ ಇತರ ಯಾವುದೇ ಅಧಿನಿಯಮಗಳ ಪ್ರಕಾರ ಬರುವ ದಾವೆ, ಮೊಕದ್ದಮೆಗಳನ್ನು ತಾಲ್ಲೂಕು ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟರಿಗೆ ಬರುವ ದಂಡ ಪ್ರಕ್ರಿಯಾ ಸಂಹಿತೆಯಲ್ಲಿಯ ಅಧಿಕಾರಗಳನ್ನು ಸಹಕಾರಿ ಸಂಘಗಳ ಅಧಿನಿಯಮಗಳ ಪ್ರಕಾರ ಬರುವ ಪಂಚಾಯಿತಿದಾರರು ನಿರ್ಣಯಿಸಬೇಕಾದ ಮಧ್ಯಸ್ಥ ನಿರ್ಣಯದ ಪ್ರಕರಣಗಳನ್ನು ಇತ್ಯರ್ಥ ಮಾಡಲು ಅಧಿಕಾರ ಕೊಟ್ಟು ಇಂತಹ ತಾಲ್ಲೂಕು ಮುನ್ಸೀಫ್